MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

YUVA MARGA KANNADA DAILY NEWS PAPER

ಸಂಪುಟ: 04 | ಸಂಚಿಕೆ: 253 | ಮಂಗಳವಾರ : 22-07-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 253 | TUESDAY : 22-07-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಜು.25ಕ್ಕೆ ಸಿಎಂ, ಡಿಕೆಶಿ ದೆಹಲಿಗೆ



**ಬೆಂಗಳೂರು, ಜು. 21–** ಮಳೆ ನಿಂತರೂ ಹನಿ ನಿಲ್ಲಲಿಲ್ಲ ಎಂಬಂತೆ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ ಚರ್ಚೆಗಳಿಗೆ ಅಂತ್ಯ ಹಾಡಿದ್ದರೂ ಚಟುವಟಿಕೆಗಳು ಮಾತ್ರ ನಿಂತಿಲ್ಲ.

ನಾಯಕರುಗಳ ದೆಹಲಿಯಾತ್ರೆ ಮುಂದುವರೆದಿದ್ದು, ಈ ತಿಂಗಳ 25 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತೆ ದೆಹಲಿಗೆ ತೆರಳುತ್ತಿದ್ದಾರೆ. ಕಳೆದ ವಾರವಷ್ಟೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದೆಹಲಿಗೆ ತೆರಳಿ ಕಾಂಗ್ರೆಸ್ ವರಿಷ್ಠರನ್ನು ಭೇಟಿ ಮಾಡಿದ್ದರು. ಆ ಸಂದರ್ಭದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯನವರು ನಾಯಕತ್ವ ಬದಲಾವಣೆ ಚರ್ಚೆಗಳಿಗೆ ತೆರೆ ಎಳೆಯುವಂತೆ ಮುಂದಿನ 5 ವರ್ಷ ನಾನೇ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರಿಗೆ ಶಾಸಕರ ಬೆಂಬಲ ಇಲ್ಲ ಎಂದು ಶಾಕಿಂಗ್ ಹೇಳಿಕೆ ಕೊಟ್ಟಿದ್ದರು.

ಈ ಎಲ್ಲ ಬೆಳವಣಿಗೆಗಳ ನಂತರ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು 3ನೇ ಬಾರಿಗೆ ರಾಜ್ಯಕ್ಕೆ ಬಂದು ಸಚಿವರುಗಳ ಜತೆ ಪ್ರತ್ಯೇಕ ಸಭೆಗಳನ್ನು ನಡೆಸಿ ಶಾಸಕರು ಹಾಗೂ ಸಚಿವರುಗಳ ಅಭಿಪ್ರಾಯ ಸಂಗ್ರಹಣೆಯ ವರದಿಯನ್ನು ಹೈಕಮಾಂಡ್‌ಗೆ ನೀಡಿದ್ದರು. ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ಅವರು ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ವೈಖರಿ, ಶಾಸಕರ **(2ನೇಪುಟಕ್ಕೆ)**

### ಪತ್ರಿಕಾ ದಿನಾಚರಣೆ, ನಾಲ್ವರಿಗೆ ದುರ್ಗದ ಸಿರಿ ಪ್ರಶಸ್ತಿ ಪ್ರದಾನ

## ಪತ್ರಿಕೆಗಳು ಮಾತ್ರ ಜನರ ವಿಶ್ವಾಸ ಉಳಿಸಿಕೊಂಡಿವೆ: ನಿರೂಪಕ ದಶರಥ್ ಸಾವೂರ್

**ಯುವ ಮಾರ್ಗ ಸುದ್ದಿ**

**ದೇವದುರ್ಗ,ಜು.21–**ಸಾಮಾಜಿಕ ಜಾಲ ತಾಣದ ಸುದ್ದಿಗಳು ಜನರ ವಿಶ್ವಾಸ ಕಳೆದು ಕೊಂಡಿದ್ದು ಪತ್ರಿಕೆಗಳು ಹಾಗೂ ಟಿವಿ ಮಾಧ್ಯಮ ಮಾತ್ರ ಸಮಾಜದ ನಂಬಿಕೆ ಹಾಗೂ ವಿಶ್ವಾಸ ಉಳಿಸಿಕೊಂಡಿವೆ. ಸತ್ಯ ಹಾಗೂ ನೈಜ ಸುದ್ದಿ ಕೊಡುವಲ್ಲಿ ಪತ್ರಿಕೆಗಳು ನಂಬಿಕೆಗೆ ಅರ್ಹವಾಗಿವೆ ಎಂದು ಟಿವಿ ನಿರೂಪಕ ದಶರಥ ಎಲ್ ಸಾವೂರ್ ಹೇಳಿದರು.

ಪಟ್ಟಣದ ಖೇಣೇದ್ ಮುರಿಗೆಪ್ಪ ಫಂಕ್ಷನ್ ಹಾಲ್‌ನಲ್ಲಿ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದಿಂದ ಆಯೋಜಿಸಿದ್ದ ತಾಲೂಕು ಮಟ್ಟದ ಪತ್ರಿಕಾ ದಿನಾಚರಣೆ ಹಾಗೂ ದುರ್ಗದ ಸಿರಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸೋಮವಾರ ಉಪನ್ಯಾಸ ನೀಡಿದರು. ಜಾಲತಾಣದ ವರದಿಗಳು ಬೇಗನೆ ಸುದ್ದಿಕೊಡುವ ಧಾವಂತದಲ್ಲಿ ಸತ್ಯಾಸತ್ಯತೆ ಪರಿಶೀಲಿಸದೆ ಹರಡುತ್ತಿವೆ. ಇಂಥ ಸುದ್ದಿಗಳು ಜನರ ಮನಸ್ಸಿನಲ್ಲಿ ಕ್ಷಣಕಾಲ ಉಳಿಯಲಿವೆ. ಆದರೆ, ಪತ್ರಿಕೆ, ಟಿವಿ ಮಾಧ್ಯಮದ ಸುದ್ದಿ



ಗಳು ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತವೆ. ಮಾಧ್ಯಮದ ಮೇಲೆ ಜನರು ಇಟ್ಟಿರುವ ವಿಶ್ವಾಸವನ್ನು ಉಳಿಸಿಕೊಳ್ಳುವುದು ಪತ್ರಕರ್ತರ ಜವಾಬ್ದಾರಿ. ಜನರು ಬಯಸುವಂಥ ಸುದ್ದಿ ನೀಡಲು ಟಿವಿ ಮಾಧ್ಯಮ ಕೆಲಸ ಮಾಡುತ್ತಿವೆ. ಇಂಥ ಸಮಯದಲ್ಲಿ ಜನರ ಟೀಕೆ ಟಿಪ್ಪಣೆಗಳನ್ನೂ ಸ್ವೀಕರಿಸಬೇಕು. ಸದ್ಯ ಮಾಧ್ಯಮ ಉದ್ಯಮವಾಗಿ ಬೆಳೆದಿದ್ದು ಇದು ಉದ್ಯೋಗ ದೃಷ್ಟಿಯಿಂದ ಉತ್ತಮ ಬೆಳವಣ ಗೆಯೂ ಹೌದು. ಇದರ ನಡುವೆ ಜನರಿಗೆ ಸತ್ಯಸುದ್ದಿ ನೀಡುವ ಜವಾಬ್ದಾರಿ ಪತ್ರಿಕೆ ಹಾಗೂ ಟಿವಿ ಮಾಧ್ಯಮ ಹೊರಬೇಕಾಗಿದೆ. ಟಿಆರ್‌ಪಿ ಜತೆಗೆ ಸಮಾಜದ ಸಮಸ್ಯೆಗಳನ್ನು ಆಲಿಸುವ ಕಡೆ ಹೆಚ್ಚಿನ ಮಹತ್ವ ಕೊಡಬೇಕಿದೆ.


ಸಂಘ ಸಂಸ್ಥೆಗಳು, ಜನರು ಪತ್ರಿಕೆ ಓದುವ ಹವ್ಯಾಸ ಉಳಿಸಿಕೊಳ್ಳಬೇಕಿದೆ. ಪತ್ರಿಕೆಗಳ ಮಹತ್ವ ಯಾವತ್ತೂ ಕಡಿಮೆಯಾಗಿಲ್ಲ. ಮುಂದೆಯೂ ಆಗಲ್ಲ. ಈ ಬೆಳವಣ ಗೆಯಲ್ಲಿ ಏರಿಳಿತಗಳು ಸಹಜ. ಅದನ್ನು ಓದುಗರು ಅರ್ಥ ಮಾಡಿಕೊಂಡು ಪತ್ರಿಕೆ ಹಾಗೂ ಟಿವಿ ನ್ಯೂಸ್ ಬೆಳೆಸಬೇಕು. ಗ್ರಾಮೀಣ ಪತ್ರಕರ್ತರು ತುಂಬ ಸಮಸ್ಯೆ ಎದುರಿಸುತ್ತಿದ್ದಾರೆ. ಪತ್ರಿಕೆ ನಂಬಿ ಬದುಕುಕೊಟ್ಟಿಕೊಳ್ಳಲು ಸಾಧ್ಯವಿಲ್ಲ. ಸರ್ಕಾರ ಪತ್ರಕರ್ತರಿಗೆ ವಿಶೇಷ ಯೋಜನೆ ರೂಪಿಸಬೇಕು. ಬಸ್ ಪಾಸ್‌ನಂತೆ ಜೀವ ವಿಮೆ, ಅಪಘಾತ ವಿಮೆ, ಗೌರವಧನ ನೀಡಲು ಯೋಜನೆ ರೂಪಿಸಬೇಕು ಎಂದು ಹೇಳಿದರು.

ಪಿಐ ಎಸ್.ಮಂಜುನಾಥ ಮಾತನಾಡಿ, ಮಾಧ್ಯಮ ಹಾಗೂ ಪೊಲೀಸ್ ಇಲಾಖೆ ಒಂದೇ ನಾಣ್ಯದ ಎರಡುಮುಖಗಳು. ಸಮಾಜದಲ್ಲಿ ಯಾರಿಗೆ ನೋವಾದರೂ ಇಬ್ಬರನ್ನು ಸಂಪರ್ಕ ಮಾಡುತ್ತಾರೆ. ಅನ್ಯಾಯಕ್ಕೆ ಒಳಗಾದವರು ಪೊಲೀಸ್ ಠಾಣೆ ಮೆಟ್ಟಿಲೇರಿದರೆ ತುಳಿತ ಕ್ಕೊಳಗಾದವರು ಮಾಧ್ಯಮದ ಕದ**(2ನೇಪುಟಕ್ಕೆ)**

## ಕುರ್ಡಿ ಗ್ರಾಮದ ಭೂರಹಿತ ರೈತರ ಹೆಸರಿಗೆ ಜಮೀನು ಮಾಡಿಸುವಂತೆ ರೈತ ಸಂಘದಿಂದ ಮನವಿ

**ಯುವ ಮಾರ್ಗ ಸುದ್ದಿ**


**ಮಾನ್ವಿ,ಜು.21–**ಪಟ್ಟಣದ ತಹಶಿಲ್ದಾರ್ ಕಚೇರಿಯಲ್ಲಿ ಕರ್ನಾಟಕ ರೈತ ಸಂಘದ ತಾಲೂಕು ಘಟಕದ ವತಿಯಿಂದ ತಹಶೀಲ್ದಾರ್ ರವರಿಗೆ ಗ್ರೇಡ್ –2 ತಹಶೀಲ್ದಾರ್ ಅಬ್ದುಲ್ ವಾಹಿದ್ ರವರ ಮೂಲಕ ಜಿಲ್ಲಾಧ್ಯಕ್ಷ ಅಶೋಕ ನೀಲಗಲ್ ಮನವಿ ಸಲ್ಲಿಸಿ ಮಾತನಾಡಿ, ಮಾನ್ವಿ ತಾಲೂಕಿನ ಕುರ್ಡಿ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಸ.ನಂ. 436/2 ರಲ್ಲಿ 11 ಎಕರೆ 20 ಗುಂಟೆ ಸರ್ಕಾರಿ ಹೆಚ್ಚುವರಿ ಜಮೀನಿನಲ್ಲಿ ಗ್ರಾಮದ ಪ.ಜಾತಿ ಭೂರಹಿತ 11 ರೈತರು ಕಳೆದ 15 ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬರುತ್ತಿದ್ದು ರೈತರು ತಹಶೀಲ್ದಾರ್ ಕಚೇರಿಗೆ ನಮೂನ್–1 ರಲ್ಲಿ ಹಾಗೂ ಫಾರಂ.ನಂ.57 ರಲ್ಲಿಯು ಅರ್ಜಿ ಸಲ್ಲಿಸಿದರು ಕೂಡ ಬಗರುಹುಕುಂ ಅರ್ಜಿಗಳ ಪರಿಷ್ಕರಣೆ ಸಮಯದಲ್ಲಿ ಹೆಚ್ಚುವರಿ ಜಮೀನಿಗೆ ಸಂಬಂದಿಸಿದಂತೆ ಎಲ್ಲಾ ಅರ್ಜಿಗಳನ್ನು ತಿರಸ್ಕಾರಿಸಲಾಗಿದೆ ಅದ್ದರಿಂದ ಈ ಅರ್ಜಿಗಳನ್ನು ಕಂದಾಯ ಇಲಾ



ಖೆ ಅಧಿಕಾರಿಗಳು ಪುನಃ ಪಂಚನಾಮೆ ಯನ್ನು ನಡೆಸಿ ಭೂ ನ್ಯಾಯ ಮಂಡಳಿಯಲ್ಲಿ ಮಂಡಿಸಿ ರೈತರ ಹೆಸರಿಗೆ ಜಮೀನು ಮಾಡಿಸಬೇಕು ಹಾಗೂ ಗ್ರಾಮದ ಮಲ್ಲನಗೌಡ ಎನ್ನುವವರು ರೈತರಿಗೆ ತಮ್ಮ ಜಮೀನಿನಲ್ಲಿ ಕೃಷಿ ಚಟುವಟಿಕೆ ನಡೆಸುವುದಕ್ಕೆ ಅಡಿಪಡಿಸುತ್ತಿದ್ದು ಅವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳ ಬೇಕು ಹಾಗೂ ರೈತ ಕುಟುಂಬಕ್ಕೆ ರಕ್ಷಣೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ತಾಲೂಕ ಅಧ್ಯಕ್ಷ ವೀರೇಶನಾಯಕ, ತಾ.ಕಾರ್ಯದರ್ಶಿ ಮಲ್ಲಯ್ಯನಾಯಕ, ಗೌರಪ್ಪದಪ,ಮೌಲಪ್ಪ, ಶಿವರಾಜದೊಡ್ಡಿ,ವೆಂಕಟೇಶನಾಯಕ, ಗೋರ್ಕಲ್ ಅದ್ಯಪ್ಪ ಗೌಡ, ಶಿವಯ್ಯನಾಯಕ, ಹನುಮಂತ ಕುಂಬಾರ, ಕಳರಾಯಪ್ಪ, ತಿಕ್ಕಯ್ಯ, ಸೇರಿದಂತೆ ಇನ್ನಿತರರು ಇದ್ದರು.

## ಚಾತುರ್ಮಾಸದ ನಂತರ ಲಿಂಗಸುಗೂರು ರಾಯರ ಮಠದ ಅಭಿವೃದ್ಧಿಗೆ ಆದ್ಯತೆ: ಶ್ರೀಗಳು



**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು,ಜು.21–** ಪಟ್ಟಣದ ಶ್ರೀ ರಾಘವೇಂದ್ರ ಸ್ವಾಮಿಮಠ ಹಾಗೂ ಕಲ್ಯಾಣ ಮಂಟಪ ಅಭಿವೃದ್ಧಿ ಪಡೆಸಲು ಚಾತುರ್ಮಾಸದ ನಂತರ ಗಮನ ಹರಿಸುವುದಾಗಿ ಮಂತ್ರಾಲಯ ಮಠದ 1008 ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಾಂಗಳವರು ತಿಳಿಸಿದರು.

ಪಟ್ಟಣದ ರಾಘವೇಂದ್ರ ಮಠಕ್ಕೆ ಆಗಮಿಸಿದಾಗ ಭಕ್ತರ ಭಜನೆ ಮೂಲಕ ಭವ್ಯ ಸ್ವಾಗತ ನೀಡಿದರು ನಂತರ ಆರ್ಶಿವರ್ಚನ ನೀಡಿದ ಅವರು,ಮಂತ್ರಾಲಯದಲ್ಲಿ ಜರುಗುವ ಯತಿಗಳ ಚಾತುರ್ಮಾಸದ ಕಾರ್ಯಕ್ರಮಕ್ಕೆ ಎಲ್ಲಾರು ಭಾಗವಹಿಸಬೇಕು ಹಾಗೂ ಮಂತ್ರಾಲಯ ಮಠದಲ್ಲಿ ಜರಗುವ 354ನೇ ಆರಾಧನ ಮಹೋತ್ಸವದಂದು ಭಾಗವಹಿಸಲು ಸ್ವಾಮಿಗಳು ತಿಳಿಸಿದರು.

ಲಿಂಗಸುಗೂರ ರಾಘವೇಂದ್ರ ಮಠ ಭೋಗೇಂದ್ರರಾವ ಮುತಾಲಿಕ ವಕೀಲರು ಹಾಗೂ ಕುಟುಂಬದವರ ಶ್ರಮದಿಂದ ಸ್ಥಾಪಿತವಾಗಿದ್ದು, ಮಠದ ಭಕ್ತರಿಗೆ ಇನ್ನೂ ಹೆಚ್ಚಿನ ಅನುಕೂಲ ನೀಡುವುದಾಗಿ ಆಶ್ವಾಸನ ನೀಡಿದರು.ಕೃಷ್ಣಾಚಾರ ಗೋತಗಿ ಮಾತನಾಡಿ ಶ್ರೀಗಳ ಆಗಮನದಿಂದ ಸಂತೋಷ ತಂದಿದೆಂದರು.

ಈ ಸಮಯದಲ್ಲಿ ಗುರುರಾಜ ಭಜನ ಮಂಡಳಿ ಅಧ್ಯಕ್ಷ ಎಂ.ಗುರುರಾಜ ವಕೀಲರು ಶ್ರೀಗಳವರನ್ನು ಸ್ವಾಗತಿಸಿದರು.

ಸಂದರ್ಭದಲ್ಲಿ ಮಂತ್ರಾಲಯ ಮಠದ ಪಂಡಿತ ವಾದಿರಾಜ ಆಚಾರ, ಅನಂತ ಪುರಾಣಿಕ, ಸ್ಥಳಿಯ ಮಠದ ವ್ಯವಸ್ಥಾಪಕ ಜಯರಾಮ ಆಚಾರ, ಆರ್ಚಕ ಪವನಾಚಾರ, ಹನುಮೇಶ ದಾಸ, ಶೇಷಗಿರಿದಾಸ, ಆಶೋಕ ದಿಗ್ಗಾವಿ, ವಿಜಯ ದೇಶಪಾಂಡೆ, ಗೋಪಿಗೀತಾ ಮಹಿಳಾ ಭಜನ ಮಂಡಳಿ ಹಾಗೂ ಮಹಿಳೆಯರು ಸೇರಿದಂತೆ ನೂರಾರು ಭಕ್ತರು ಭಾಗವಹಿಸಿದರು.

## ಮಧ್ಯಸ್ಥಿಕೆದಾರರು ಹಾಗೂ ವಕೀಲರು ಮಧ್ಯಸ್ಥಿಕೆ ಅಭಿಯಾನ ಯಶಸ್ವಿಗೊಳಿಸಬೇಕು

**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು,ಜು.21–**ಮಧ್ಯಸ್ಥಿಕೆದಾರರು ಹಾಗೂ ವಕೀಲರು ಕಕ್ಷಿದಾರರ ಮನವೊಲಿಸುವ ಮೂಲಕ ಜುಲೈ ಒಂದರಿಂದ ಹಮ್ಮಿಕೊಳ್ಳಲಾಗಿರುವ 90 ದಿನಗಳ ಮಧ್ಯಸ್ಥಿಕೆ ವಿಶೇಷ ಅಭಿಯಾನವನ್ನು ಯಶಸ್ವಿಗೊಳಿಸಬೇಕೆಂದು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಉಂಡಿ ಮಂಜುಳಾ ಶಿವಪ್ಪ ಕರೆ ನೀಡಿದರು.

ಪಟ್ಟಣದ ನ್ಯಾಯಾಲಯ ಸಭಾಂಗಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮದ್ಯಸ್ಥಗಾರಿಕೆ ಮೂಲಕ ಯಾವ ಪ್ರಕರಣಗಳ ಇತ್ಯರ್ಥ ಆಗುತ್ತವೆ ಎಂದು ನ್ಯಾಯಾಧೀಶರು ನಿರ್ಧರಿಸುತ್ತಾರೆ. ಮದ್ಯೆಸ್ಥಗಾರರ ಮೂಲಕ ಇತ್ಯರ್ಥಪಡಿಸಿಕೊಂಡ ಪ್ರಕರಣಗಳಲ್ಲಿ ಮೇಲ್ಮನಿ ಸಲ್ಲಿಸಲು ಅವಕಾಶ ಇರುವುದಿಲ್ಲ. ಏಕೆಂದರೆ ಪ್ರಕರಣದ ಎರಡು ಕಡೆಯ ಕಕ್ಷಿದಾರರ ಒಪ್ಪದಂದ ಮೇಲೆ ಪ್ರಕರಣ ಇತ್ಯರ್ಥವಾಗಿರುತ್ತದೆ. ಮದ್ಯೆಸ್ಥಗಾರರ ಮೂಲಕ





ಪ್ರಕರಣ ಬಗೆಹರಿಸಿಕೊಂಡರೆ ನ್ಯಾಯಾಲ ಯ ಸಮಯ ಉಳಿಯುವ ಜೊತೆಗೆ ಕಕ್ಷಿದಾರರು ವೃತಾ ಅಲೆಯುವುದು ತಪ್ಪುತ್ತದೆ ಮತ್ತು ಖರ್ಚು ಕಡಿಮೆಯಾಗುತ್ತದೆ. ಮದ್ಯೆಸ್ಥಗಾರರ ಮೂಲಕ ಪ್ರಕರಣಗಳ ಇತ್ಯರ್ಥ ಅಭಿಯಾನವು ಅಕ್ಟೋಬರ್ ವರೆಗೆ ನಡೆಯಲಿದೆ. ಕಕ್ಷಿದಾರರು ಇದರ ಸದುಪಯೋಗ ಪಡಿಸಿಕೊಂಡರೆ ಖರ್ಚು ಕಡಿಮೆಯಾಗಿ ನ್ಯಾಯಾಲಯಕ್ಕೆ ಅಲೆಯುವ ಪ್ರಮೆಯ ತಪ್ಪುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಅಂಬಣ್ಣ ಕೆ. ವಕೀಲರ ಸಂಘದ ಅಧ್ಯಕ್ಷ ಭೂಪನಗೌಡ ಕರಡಕಲ್, ಹಿರಿಯ ನ್ಯಾಯವಾದಿಗಳಾದ ಎ. ನಾಗಪ್ಪ ಸರ್ಜಾಪುರ, ಕೆಕೆ ವಿಶ್ವನಾಥ, ಮಾನಪ್ಪ ನಾಯಕ, ನಾಗರಾಜ ಗಸ್ತಿ, ಗಿರೀಶ ಜೋಷಿ, ಶಿವಲಿಂಗಪ್ಪ, ಬಸವಲಿಂಗಪ್ಪ ವಸ್ತ್ರದ ಸೇರಿದಂತೆ ಇದ್ದರು.

## ಕಲ್ಮಠ ಶ್ರೀಗಳ ಮೌನಾನುಷ್ಠಾನ ಮಂಗಲ ಕಾರ್ಯಕ್ರಮ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಜು.21–** ಪಟ್ಟಣದ ಐತಿಹಾಸಿಕ ಬೆಟ್ಟದ ಶ್ರೀಶ್ರೀಶೈಲ ಭ್ರಮಾರಂಭ, ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ಕಲ್ಮಠ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳ 11 ದಿನಗಳ ಮೌನಾನುಷ್ಠಾನ ಮಂಗಲ ಕಾರ್ಯಕ್ರಮ ಅಂಗವಾಗಿ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ



ಶಿವಾಚಾರ್ಯ ಮಹಾಸ್ವಾಮಿಗಳು ಶ್ರೀ ಶ್ರೀಶೈಲ ಭ್ರಮಾರಂಭ, ಮಲ್ಲಿಕಾರ್ಜುನ ಸ್ವಾಮಿಗೆ ವಿಶೇಷವಾಗಿ ಅಭಿಷೇಕ, ಮಹಾ ಮಂಗಲರಾತಿ,ಹೂವಿನ ಅಲಂಕಾರ ಸೇರಿದಂತೆ ವಿಶೇಷ ಪೂಜೆ ಸಲ್ಲಿಸಿದರು, ನಿಲೋಗಲ್ ಮಠದ ಡಾ.ಪಂಚಾಕ್ಷರ ಶಿವಚಾರ್ಯ ಮಹಾಸ್ವಾಮಿಗಳ ಪಾದಪೂಜೆ ನಡೆಸಿದರು ನಂತರ ದೇವಸ್ಥಾನದ ಆವರಣದಲ್ಲಿ ನಡೆದ ಧರ್ಮ ಸಭೆಯಲ್ಲಿ ಆರ್ಶಿವಾಚನ ನೀಡಿ ನಾಡಿನಲ್ಲಿ ಉತ್ತಮ ಮಳೆಯಾಗಿ ಸಮೃದ್ದಿಯಾದ ಬೆಳೆಯನ್ನು ರೈತರು ಬೆಳೆಯುವಂತಾಗಲಿ, ನಾಡಿನ ಜನರು ಸುಖ, ಶಾಂತಿ, ನೆಮ್ಮದಿಯಿಂದ ಬಾಳಲಿ, ದೇಶದಲ್ಲಿ ಶಾಂತಿ ನೆಲೆಸುವಂತಾಗಲಿ ಎನ್ನುವ ಉದ್ದೇಶದಿಂದ ಐತಿಹಾಸಿಕ ಬೆಟ್ಟದ ಶ್ರೀ ಶ್ರೀಶೈಲ ಭ್ರಮಾರಂಭ, ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ 11 ದಿನಗಳ ಮೌನಾನುಷ್ಠಾನ ಕೈಗೊಳ್ಳಲಾಯಿತು, ಹಿಂದಿನ ಹಿರಿಯರು ಶ್ರೀ ಶೈಲಕ್ಕೆ ಹೋಗುವುದಕ್ಕೆ ಅಗಾದೆ ಇರುವವರಿಗೆ ಪಟ್ಟಣದಲ್ಲಿಯೇ ಮಲ್ಲಯ್ಯ ದರ್ಶನ ವಾಗಲಿ ಎನ್ನುವ ಉದ್ದೇಶದಿಂದ ಬೆಟ್ಟದಲ್ಲಿ ಶ್ರೀಶೈಲ ಮಲ್ಲಿಕಾರ್ಜುನ ಹಾಗೂ ಶ್ರೀಭ್ರಮಾರಂಭ ದೇವಿಯ ಪ್ರತಿರೂಪದಂತೆ ದೇವಸ್ಥಾನವನ್ನು ನಿರ್ಮಿಸಲಾಗಿದ್ದು ದೇವಸ್ಥಾನವು ಐತಿಹಾಸಿಕವಾಗಿ ಭಕ್ತರಿಗೆ ಕೇಳಿದ ವರವನ್ನು ನೀಡುವ ಜಾಗೃತ ಕ್ಷೇತ್ರವಾಗಿದೆ ಬೆಟ್ಟದ ಶ್ರೀ ಶ್ರೀಶೈಲ ಭ್ರಮಾರಂಭ, ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಜಿರ್ಣೋದ್ದಾರವನ್ನು ಭಕ್ತರ ಸಹಕಾರದಿಂದ ಮುಂದಿನ ದಿನಗಳಲ್ಲಿ ಕೈಗೊಳ್ಳಲಾಗುವುದು ಎಂದು ತಿಳಿಸಿದರು.ನಿಲೋಗಲ್ ಮಠದ ಡಾ.ಪಂ ಚಾಕ್ಷರ ಶಿವಚಾರ್ಯ ಮಹಾಸ್ವಾಮಿಗಳು,ಚೀಕಲಪರ್ವಿ ಶ್ರೀ ರುದ್ರಮುನೀಶ್ವರ ಮಠದ ಶ್ರೀಸದಾಶಿವ ಮಹಾಸ್ವಾಮಿಗಳು , ತಾ. ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಹರಿಹರ ಪಾಟೀಲ್ ಇದ್ದರು.

# ಮೊದಲನೇಯ ಪುಟದಿಂದ

## ಪತ್ರಿಕೆಗಳು ಮಾತ್ರ ಜನರ ವಿಶ್ವಾಸ ಉಳಿಸಿಕೊಂಡಿವೆ: ನಿರೂಪಕ ದಶರಥ್ ಸಾವೂರ್

ತಟ್ಟುತ್ತಾರೆ. ನಾವು ಕರ್ತವ್ಯ ಅಂಥ ಮಾಡಿದರೆ ಮಾಧ್ಯಮಮಿತ್ರರು ಸೇವೆಯೆಂದು ಕೆಲಸ ಮಾಡುತ್ತಾರೆ ಎಂದರು.

ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಎ.ರಾಜಶೇಖರ ನಾಯಕ, ಜೆಡಿಎಸ್ ನಾಯಕಿ ಗೌರಿ ಜಿ.ನಾಯಕ ಜಂಟಿಯಾಗಿ ಕಾರ್ಯಕ್ರಮ ಉದ್ಘಾಟಿಸಿದರು. ವರದಿಗಾರರಾದ ಮಹಾಂತೇಶ ಹಿರೇಮಠ, ಮಹಾಂತೇಶ ಹಿರೇಮಠ, ನಿರಂಜನ್ ಮಸರಕಲ್, ಸಚ್ಚಿದಾನಂದ ನಾಯಕಗೆ ದಿ.ಎ.ವೆಂಕಟೇಶ ನಾಯಕ ಸ್ಮರಣಾರ್ಥ ಕೊಡಮಾಡುವ ದುರ್ಗದ ಸಿರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪುರಸಭೆ ಅಧ್ಯಕ್ಷ ಮಲ್ಲಮ್ಮ ಶಾಂತಪ್ಪ ಹೆಂಬೆರಹಾಳ, ಉಪಾಧ್ಯಕ್ಷೆ ಲಕ್ಷ್ಮಿ ಈರಪ್ಪ, ಎಪಿಎಂಸಿ ಅಧ್ಯಕ್ಷ ಆದನಗೌಡ ಬುಂಕಲದೊಡ್ಡಿ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಶರಣಗೌಡ ಹಂಚಿನಾಳ, ಬಿಇಒ ಮಹಾದೇವಯ್ಯ, ವೀರಶೈವ ಮಹಾಸಭಾ ರಾಜ್ಯ ಸಮಿತಿ ಸದಸ್ಯ ವೆಂಕಟರಾಯ ಬೆನಕನ್, ಸಿಪಿಐ ಎನ್.ವೈ.ಗುಂಡುರಾವ್, ಪಿಐ ಎಸ್.ಮಂಜುನಾಥ, ಎಇಇ ಉಪೇಂದ್ರಕುಮಾರ ಮ್ಯಾತ್ರಿ, ಪುರಸಭೆ ಮುಖ್ಯಾಧಿಕಾರಿ ಕೆ.ಹಂಪಯ್ಯ, ಸೂಗೂರೇಶ ಗುಡಿ, ಅಲಿಬಾಬ ಪಟೇಲ್, ಸಂಘದ ಅಧ್ಯಕ್ಷ ಬಾಬುಅಲಿ ಕರಿಗುಡ್ಡ, ಕಾರ್ಯದರ್ಶಿ ನಾಗರಾಜ ಸುಟ್ಟಿ ಇತರರಿದ್ದರು.

## ಜು.25ಕ್ಕೆ ಸಿಎಂ, ಡಿಕೆಶಿ ದೆಹಲಿಗೆ

ದೂರು ದುಮ್ಮಾನಗಳ ಬಗ್ಗೆ ನೀಡಿರುವ ವರದಿಯನ್ನು ಹೈಕಮಾಂಡ್ ಗಂಭೀರವಾಗಿ ಪರಿಗಣಿಸಿದೆ ಎನ್ನಲಾಗಿದ್ದು, ಈ ಬಗ್ಗೆ ಚರ್ಚಿಸಲು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ದೆಹಲಿಗೆ ಬರುವಂತೆ ಸೂಚಿಸಿದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಹೈಕಮಾಂಡ್‌ನ ಬುಲಾವ್ ಮೇರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಈ ತಿಂಗಳ 25 ರಂದು ದೆಹಲಿಗೆ ತೆರಳುತ್ತಿದ್ದಾರೆ.ಈ ದೆಹಲಿ ಭೇಟಿಯನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರು ದೃಢಪಡಿಸಿದ್ದು, ನಾನು ಮತ್ತು ಸಿಎಂ ಈ ತಿಂಗಳ 25 ರಂದು ದೆಹಲಿಗೆ ಹೋಗುತ್ತಿದ್ದೇವೆ.ದೆಹಲಿಯಲ್ಲಿ ಸಂಸತ್ ಅಧಿವೇಶನ ನಡೆಯುತ್ತಿದೆ ಎಂದು ಹೇಳಿದರು.ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ಅವರು ಮತ್ತೆ ರಾಜ್ಯಕ್ಕೆ ಭೇಟಿ ನೀಡುವ ಬಗ್ಗೆ ಕೇಳಲಾದ ಪ್ರಶ್ನೆಗೆ ಸ್ಪಷ್ಟ ಉತ್ತರ ನೀಡದ ಅವರು, ನಾನು ಮತ್ತು ಸಿಎಂ ದೆಹಲಿ ಪ್ರವಾಸವನ್ನು ಈ ತಿಂಗಳ 25 ರಂದು ಮಾಡುತ್ತಿದ್ದೇವೆ. ಇಷ್ಟೇ ನನಗೆ ಗೊತ್ತಿರುವ ಮಾಹಿತಿ ಎಂದಿದ್ದರು.

ರಾಹುಲ್ ಭೇಟಿ ಸಾಧ್ಯತೆ:ಕಳೆದ ಬಾರಿ ದೆಹಲಿಗೆ ಹೋಗಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್‌ಗಾಂಧಿಯವರ ಭೇಟಿ ಸಾಧ್ಯವಾಗಿರಲಿಲ್ಲ. ಹಾಗಾಗಿ ಈ ಬಾರಿ ರಾಹುಲ್‌ಗಾಂಧಿಯವರನ್ನು ಭೇಟಿ ಮಾಡಲೆಂದೇ ಈ ಇಬ್ಬರು ನಾಯಕರು ದೆಹಲಿಗೆ ತೆರಳುತ್ತಿದ್ದಾರೆ ಎಂದು ಹೇಳಲಾಗುತ್ತಿದೆ.

ಸಂಸತ್ ಅಧಿವೇಶನ ಇರುವುದರಿಂದ ರಾಹುಲ್‌ಗಾಂಧಿಯವರು ದೆಹಲಿಯಲ್ಲೇ ಇರಲಿದ್ದು, ಈ ಇಬ್ಬರು ನಾಯಕರು ರಾಹುಲ್‌ಗಾಂಧಿಯವರನ್ನು ಭೇಟಿ ಮಾಡಿ ರಾಜ್ಯ ರಾಜಕೀಯ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸುವರು ಎಂದು ಹೇಳಲಾಗಿದೆ.

## ಲೋಯಾಲ ಕಾಲೇಜ್‌ನಲ್ಲಿ ವಿದ್ಯಾರ್ಥಿ ದೃಷ್ಟಿಕೋನ ಕಾರ್ಯಕ್ರಮ



ಯುವ ಮಾರ್ಗ ಸುದ್ದಿ

**ಮಾನ್ವಿ,ಜು.21–**ಪಟ್ಟಣದ ಲೋಯಾಲ ಶಿಕ್ಷಣ ಸಂಸ್ಥೆ ಕಾಲೇಜ್ ಸಭಾಂಗಣದಲ್ಲಿ ಬಿ.ಎ.ಬಿ.ಕಾಂ. ಬಿ.ಎಸ್.ಸಿ. 2025–26 ಪದವಿ ವಿದ್ಯಾರ್ಥಿಗಳಿಗಾಗಿ ನಡೆದ ವಿದ್ಯಾರ್ಥಿ ದೃಷ್ಟಿಕೋನ ಕಾರ್ಯಕ್ರಮ ವನ್ನು ಲೋಯಾಲ ಸಮಾಜ ಸೇವ ಕೇಂದ್ರದ ಸಹಾಯಕ ನಿರ್ದೇಶಕರಾದ ರೆವರೆಂಡ್ ಫಾದರ್ ಜಾರ್ಜ ಪಿಂಟೋ ಎಸ್.ಜೆ. ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಸಮಾಜ ಸೇವೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಸಾಧಕರ ಸಾಧನೆಗಳನ್ನು ತಮ್ಮ ಜೀವನಕ್ಕೆ ಪ್ರೇರಣೆಯನ್ನಾಗಿ ಮಾಡಿಕೊಂಡಾಗ ಮಾತ್ರ ಉತ್ತಮ ನಾಗರಿಕರಾಗಿ ಬದುಕುವುದಕ್ಕೆ ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ದೈಹಿಕ ಅಗತ್ಯತೆಗಳು, ಸಾಮಾಜಿಕ ಅಗತ್ಯತೆಗಳು, ಬೌದ್ಧಿಕ ಅಗತ್ಯತೆಗಳು, ಆಧ್ಯಾತ್ಮಿಕ ಅಗತ್ಯತೆಗಳನ್ನು ಅಳವಡಿಸಿಕೊಂಡಾಗ ಮಾತ್ರ ಪರಿಪೂರ್ಣ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ರೆವರೆಂಡ್ ಫಾದರ್ ಅವಿನಾಶ ಲೋಬೊ ಎಸ್.ಜೆ. ಮಾತನಾಡಿ ಪ್ರತಿಯೊಬ್ಬ ವಿದ್ಯಾರ್ಥಿ ಕೂಡ ನಾನು ಯಾರು .ನಾನು ಏನನ್ನು ಮಾಡಬಹುದು. ಎನ್ನುವುದರ ಕುರಿತು ಆತ್ಮವಲೋಕನವನ್ನು ಮಾಡಿಕೊಂಡು ಕೌಶಲ್ಯ, ವೀವೇಚನೆ, ಸಂವಾದ, ಕ್ರಿಯಾಶೀಲತೆ, ಪ್ರೇರಣೆ, ಏಕಾಗ್ರತೆ, ಗುರಿಗಳನ್ನು ಹೊಂದಿ ಸಾಧಿಸುವ ಛಲ ಇದ್ದಲ್ಲಿ ಮಾತ್ರ ಜೀವನದಲ್ಲಿ ಉನ್ನತವಾದ ಯಶಸ್ಸನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜೋಯೆಲ್, ಪ್ರಿಯಾಂಕ ಶ್ವೇತಾ ಸೇರಿದಂತೆ ಕಾಲೇಜಿನ ಪ್ರಾಚಾರ್ಯರು, ಉಪನ್ಯಾಸಕರು, ವಿದ್ಯಾರ್ಥಿಗಳು ಇದ್ದರು.

## ಬಿ.ಗಣೇಕಲ್ ನಲ್ಲಿ ಹಳೆಯ ವಿದ್ಯಾರ್ಥಿಗಳಿಂದ ಸ್ವಚ್ಛತೆ ಕಾರ್ಯಕ್ರಮ

ಯುವ ಮಾರ್ಗ ಸುದ್ದಿ

**ಅರಕೇರಾ,ಜು.21–** ತಾಲೂಕಿನ ಬಿ.ಗಣೇಕಲ್ ಗ್ರಾಮದಲ್ಲಿ ಸರಕಾರಿ ಮಾದರಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಳೆಯ ವಿದ್ಯಾರ್ಥಿಗಳ ಬಳಗದ ವತಿಯಿಂದ ಬಿ.ಗಣೇಕಲ್ ಶಾಲೆಯ ಆವರಣದಲ್ಲಿ ಸ್ವಚ್ಛತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮದಲ್ಲಿ ಊರಿನ ಎಲ್ಲಾ ಹಳೆಯ ವಿಧ್ಯಾರ್ಥಿಗಳು ಸೇರಿ ಶಾಲೆಯ ಆವರಣ, ಸ್ವಚ್ಛತೆ, ಕುಡಿಯುವ ನೀರಿನ ಟ್ಯಾಂಕರ್ ಸ್ವಚ್ಛತೆ ಮಾಡಿದರು. ಶಾಲೆಯ ಆವರಣದಲ್ಲಿ ಪ್ರಯೋಜನಕ್ಕೆ ಬಾರದ ಇಟ್ಟಿಗೆಗಳಿಂದ ಶಾಲೆಯ ಮಕ್ಕಳಿಗೆ ಹಾಗೂ ಪಾಲಕರಿಗೆ ಕುಳಿತುಕೊಳ್ಳುವ ಕಟ್ಟೆಗಳನ್ನು ನಿರ್ಮಿಸಿದರು. ಕೊನೆಯದಾಗಿ ಶಾಲೆ ಆವರಣದಲ್ಲಿ ಸಸಿಗಳನ್ನು ನೆಡುವ ಮೂಲಕ ತಮ್ಮ ಗ್ರಾಮದ ಶಾಲೆಗೆ ನಿಸ್ವಾರ್ಥದಿಂದ ಸೇವೆ ಸಲ್ಲಿಸಿದರು ಈ ಕಾರ್ಯದಲ್ಲಿ ಗ್ರಾಮದ ಹಳೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮುಂದಿನ ದಿನಗಳಲ್ಲಿ ಊರಿನಲ್ಲಿ ಆರೋಗ್ಯ ಸುಧಾರಣೆ, ಶಿಕ್ಷಣಕ್ಕೆ ಒತ್ತು ಕೊಡುವುದು ಹಾಗೂ ಮುಂತಾದ ಸಮಾಜಿಕ ಕಾರ್ಯಕ್ರಮಗಳು ಆಯೋಜಿಸುವ ಮೂಲಕ ಸಮಾಜಕ್ಕೆ ಮಾದರಿಯಾಗುತ್ತೆವೆ ಎಂದರು. ಹಾಗೆ ವೃದ್ದರು ಹಾಗೂ ಗ್ರಾಮದ ಜನತೆಗೆ ಅನುಕೂಲವಾಗುವ ದೃಷ್ಟಿಯಿಂದ ಆರೋಗ್ಯ ಶಿಬಿರ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು, ಇದರಲ್ಲಿ ಗ್ರಾಮದ ಹೆಚ್ಚಿನ ಜನರನ್ನು ಸೇರಿಸುವಂತೆ ಯುವಕರು ಕರೆ ನೀಡಿದರು.



ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಶಿವರಾಜ ಭೋವಿ ಮಾತನಾಡಿ ಊರಿನ ಯುವಕರು ಇಂತಹ ಸಮಾಜಿಕ ಕಾರ್ಯಕ್ರಮಗಳನ್ನು ಮಾಡುವ ಮುಖಾಂತರ ಇತರರಿಗೆ ಮಾದರಿಯಾಗುವಿರಿ ಇದರಿಂದ ಸಾಮಾನ್ಯ ಜನರಿಗೆ ಬಹಳಷ್ಟು ಅನುಕೂಲ ಆಗುವುದು ಅದರೆ ಗ್ರಾಮಸ್ಥರು ಊರಿನಲ್ಲಿ ನಡೆಯುವ ಶಿಬಿರ ಆಂದೋಲನಗಳ ಉತ್ತಮ ರೀತಿಯಲ್ಲಿ ಪ್ರಯೋಜನ ಪಡೆದುಕೊಳ್ಳಬೇಕು ಎಂದು. ಊರಿನ ಹಳೆ ವಿದ್ಯಾರ್ಥಿ ಗೆಳೆಯರ ಬಳಗ ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಕಾರ್ಮಕ್ರಮ ಮಾಡುವ ಶಕ್ತಿ ಚೈತನ್ಯ ಸಿಗಲೆಂದು ಯುವಕರಿಗೆ ಕರೆ ನೀಡಿದರು. ಈ ಸಂದರ್ಭದಲ್ಲಿ ಊರಿನ ಎಲ್ಲಾ ಹಳೆಯ ವಿದ್ಯಾರ್ಥಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು.

## ರಾಯಚೂರ ಸಿಟಿಯ ಎಲ್ಲ ವಾರ್ಡನಲ್ಲಿ ಕುಡಿಯುವ ನೀರಿನ ಪರೀಕ್ಷೆ ನಿಯಮಿತವಾಗಿ ನಡೆಸಬೇಕು



ಯುವ ಮಾರ್ಗ ಸುದ್ದಿ

**ರಾಯಚೂರು,ಜು.22–**ಸಾರ್ವಜನಿಕರಿಗೆ ಗುಣಮಟ್ಟದ ಯೋಗ್ಯವಾದ ನೀರನ್ನು ಪೂರೈಸುವುದು ಮಹಾನಗರ ಪಾಲಿಕೆಯ ಮಹತ್ವದ ಕಾರ್ಯವಾಗಿದೆ. ಇದನ್ನು ಮನದಲ್ಲಿಟ್ಟುಕೊಂಡು ಮಹಾನಗರ ಪಾಲಿಕೆಯ ಸಂಬಂಧಿಸಿದ ಅಧಿಕಾರಿ ಮತ್ತು ಸಿಬ್ಬಂದಿ ಕುಡಿಯುವ ನೀರಿನ ಪರೀಕ್ಷೆಯ ಕಾರ್ಯವನ್ನು ನಿಯಮಿತವಾಗಿ ನಡೆಸಬೇಕು ಎಂದು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಾಪತ್ರ ಅವರು ಹೇಳಿದರು.

ಮಹಾನಗರ ಪಾಲಿಕೆಯ ಕುಡಿಯುವ ನೀರು ಸರಬರಾಜು ಸಿಬ್ಬಂದಿಗೆ ನೀರು ಪರೀಕ್ಷೆಯ ಕಿಟ್ ಮೂಲಕ ವಾರ್ಡ ಮಟ್ಟದಲ್ಲಿ ನೀರನ್ನು ಪರೀಕ್ಷಿಸುವ ವಿಧಾನದ ಬಗ್ಗೆ ತಿಳಿಸಲು ವಲಯ ಕಚೇರಿಯ ಸಭಾಂಗಣದಲ್ಲಿ ನಡೆದ ಕಾರ್ಯಗಾರದಲ್ಲಿ ಅವರು ಮಾತ ನಾಡಿದರು. ಅಶುದ್ಧವಾದ ನೀರನ್ನು ಕುಡಿಯುವುದರಿಂದಲೇ ಬಹುತೇಕ ಕಾಯಿಲೆಗಳು ಒಕ್ಕರಿಸುತ್ತವೆ. ಶುದ್ಧವಾದ ನೀರನ್ನು ಕುಡಿದಾಗ ಮಾತ್ರ ಆರೋಗ್ಯ ಉತ್ತಮವಾಗಿರುತ್ತದೆ. ಆದ್ದರಿಂದ ನಗರದ ಸಾರ್ವಜನಿಕರ ಆರೋಗ್ಯ ಹಿತದೃಷ್ಟಿಯಿಂದಾಗಿ ಶುದ್ಧವಾದ ಕುಡಿಯುವ ನೀರನ್ನು ಪೂರೈಸಬೇಕು. ನೀರನ್ನು ಸ್ಥಾನಿಕವಾಗಿ ಸಂಗ್ರಹಿಸಿ ಎಫ್‌ಟಿಕೆ ಕಿಟ್‌ಗಳನ್ನು ಬಳಸಿ, ಪರೀಕ್ಷಿಸಿ ನೀರು ಕುಡಿಯಲು ಯೋಗ್ಯವಿದೆ ಎಂಬುದರ ಬಗ್ಗೆ ವರದಿ ಪಡೆದುಕೊಂಡೇ ನೀರು ಸರಬರಾಜು ಮಾಡಬೇಕು. ಈ ಕಾರ್ಯವು ಇನ್ಮುಂದೆ ಪ್ರತಿ ವಾರ್ಡಿನಲ್ಲಿ ನಿಯಮಿತವಾಗಿ ನಡೆಯಬೇಕು ಎಂದು ಆಯುಕ್ತರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕಾರ್ಯಗಾರದಲ್ಲಿ ಭಾಗಿಯಾಗಿದ್ದ ಕುಡಿಯುವ ನೀರು ಸರಬರಾಜು ಮಾಡುವ ಸಿಬ್ಬಂದಿ, ಎಂಜಿನಿಯರುಗಳು, ವಾಲ್ ಆಪರೇಟರ್ ಹಾಗು ಇನ್ನಿತರ ಸಿಬ್ಬಂದಿಗೆ ಎಫ್‌ಟಿಕೆ ಕಿಟ್‌ಗಳನ್ನು ಹೇಗೆ ಬಳಸಬೇಕು ಎಂಬುದರ ಬಗ್ಗೆ ಬಳಕೆಯ ವಿಧಾನದ ಮಾಹಿತಿ ನೀಡಲಾಯಿತು.

ಕಾರ್ಯಗಾರದಲ್ಲಿ ಪಾಲಿಕೆಯ ಉಪ ಆಯುಕ್ತರಾದ ಮೇನಕಾ ಪಟೇಲ್, ಸಹಾಯಕ ಕಾಯರ್ಪಾಲಕ ಅಭಿಯಂತರಾದ ಮಹೇಶ್ ಕುಮಾರ್ ಮತ್ತು ಎಲ್ಲಾ ಎಂಜಿನಿಯರು ಉಪಸ್ಥಿತರಿದ್ದರು.

## ಕುಡಿಯುವ ನೀರಿನ ತೊಂದರೆಯಾಗದಂತೆ ಕ್ರಮ ಕೈಗೊಳ್ಳಿ: ಎನ್.ಎಸ್.ಬೋಸರಾಜು

ಯುವ ಮಾರ್ಗ ಸುದ್ದಿ

**ಮಾನ್ವಿ,ಜು.21–**ಪಟ್ಟಣದ ಪ್ರವಾಸಿ ಮಂದಿರದಲ್ಲಿ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಬೋಸರಾಜು ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ತೊಂದರೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಹಾಗೂ ವಸತಿ ರಹಿತ ಕುಟುಂಬಗಳನ್ನು ಗುರುತಿಸಿ ಅವರಿಗೆ ವಸತಿ ಯೋಜನೆಗಳ ಅಡಿ ಫಲಾನುಭವಿಗಳಿಗೆ ಹಂಚಿಕೆ ಮಾಡುವುದಕ್ಕೆ ಶಾಸಕರ ನೇತೃತ್ವದಲ್ಲಿ ಸಭೆ ನಡೆಸಿ ಫಲಾನುಭವಿಗಳ ಅಂತಿಮ ಪಟ್ಟಿಯನ್ನು ತಯಾರಿಸಿ ನೀಡುವಂತೆ ತಾಲೂಕು ಪಂಚಾಯಿತಿ ಇ.ಓ.ಖಾಲೀದ್ ಅಹಮ್ಮದ್ ರವರಿಗೆ ಸೂಚಿಸಿದರು

ಕುಡಿಯುವ ನೀರು ನೈರ್ಮಲ್ಯ ಇಲಾಖೆ ಅಧಿಕಾರಿಗಳು ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಕಾಮಗಾರಿಗಳು ಗುಣಮಟ್ಟದಲ್ಲಿರುವಂತೆ ನೋಡಿಕೊಳ್ಳಿ ಹಾಗೂ ಜನರಿಗೆ ಕುಡಿಯುವ ನೀರು ಪೂರೈಕೆ ಮಾಡುವುದಕ್ಕೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಮಾನ್ವಿ ನಗರದಲ್ಲಿನ ವಿವಿಧ ವಾರ್ಡಗಳಿಗೆ ಸರಿಯಾಗಿ ಕುಡಿಯುವ ನೀರು ಪೂರೈಕೆಗೆ ಕ್ರಮ ಕೈಗೊಳ್ಳಬೇಕು ಹಾಗೂ ಕುಡಿಯುವ ನೀರಿನ ಯೋಜನೆಗಳಾದ ಜೆ.ಜೆ.ಎಂ. ಹಾಗೂ ಅಮೃತ್–2 ಕುಡಿಯುವ ನೀರಿನ ಯೋಜನೆಗಳ ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳುವಂತೆ ಹಾಗೂ ಮುಖ್ಯ ರಸ್ತೆ ಹಾಗೂ ರಾಜ ಕಾಲೂವೆಗಳಲ್ಲಿ ಮಳೆನೀರು ನಿಲ್ಲದಸಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಮಾನ್ವಿ ಪುರಸಭೆ ಮುಖ್ಯಾಧಿಕಾರಿ ಪರಶುರಾಮ್ ದೇವಮಾನೆ ರವರಿಗೆ ಸೂಚಿಸಿದರು.

ರೈತರು ಬೆಳೆಯನ್ನು ಬೆಳೆಯುವುದಕ್ಕೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಈ ಬಾರಿ ತುಂಗಭದ್ರಜಲಾಶಯದಿಂದ ಕಾಲುವೆಗಳಿಗೆ ನೀರು ಬಿಟ್ಟಿದ್ದು ತಾಲೂಕಿನಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಕಾಲೂವೆ ಕೋನೆಭಾಗದ ಟೇಲ್ಯಾಂಡ್ ಜಮೀನುಗಳಿಗೂ ಕೂಡ ಸಮರ್ಪಕವಾಗಿ ನೀರು ಹರಿಯುವಂತೆ ನೀರಾವರಿ ಇಲಾಖೆಯ ಅಧಿಕಾರಿಗಳು ಸರಿಯಾಗಿ ನೀರು ನಿರ್ವಹಣೆ ಮಾಡುವ ಮೂಲಕ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ನೀರಾವರಿ ಇಲಾಖೆ ಎ.ಇ.ಇ. ವಿಜಯಲಕ್ಷ್ಮಿ ರವರಿಗೆ ಸೂಚಿಸಿದರು. ಕಾಲೂವೆ ಮೂಲಕ ಅಕ್ರಮವಾಗಿ ನೀರು ಹರಿಸಿಕೊಳ್ಳುತ್ತಿರುವವರ ಮೇಲೆ ಅಗತ್ಯ ಕ್ರಮ ಕೈಗೊಳ್ಳುವುದಕ್ಕೆ ನೀರಾವರಿ ಇಲಾಖೆ ಅಧಿಕಾರಿಗಳಿಗೆ ಸಹಕಾರ ನೀಡುವಂತೆ ಮಾನ್ವಿ ಪೊಲೀಸ್ ಠಾಣೆ ಪಿ.ಐ.ಸೋಮಶೇಖರ ಎಸ್.ಕೆಂಚರೆಡ್ಡಿ ರವರಿಗೆ ಸೂಚಿಸಿದರು.



ಮುಂಗಾರು ಹಂಗಾಮಿನಲ್ಲಿ ತಾಲೂಕಿನಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ತಾಲೂಕಿನಲ್ಲಿ ರೈತರು ಕೃಷಿ ಚಟುವಟಿಕೆಗಳನ್ನು ಪ್ರಾರಂಭಿಸಿದ್ದು ಕೃಷಿ ಇಲಾಖೆಯ ಅಧಿಕಾರಿಗಳು ರೈತರಿಗೆ ಅಗತ್ಯವಾಗಿರುವ ಬೀಜ ಗೊಬ್ಬರ ಕೊರತೆಯಾಗದಂತೆ ಅಗತ್ಯ ದಾಸ್ತನು ಇರುವಂತೆ ನೋಡಿಕೊಳ್ಳಬೇಕು ಎಂದು ತಾ.ಕೃಷಿ ಸಹಾಯಕ ನಿರ್ದೇಶಕರಾದ ಗುರುನಾಥ ಭೂಸನೂರ್ ರವರಿಗೆ ಸೂಚಿಸಿದರು.

ರೈತರು ನಾಟಿ ಕಾರ್ಯ ಕೈಗೊಂಡಿರುವುದರಿಂದ ರೈತರ ಪಂಪ್ ಸೇಟ್ ಗಳಿಗೆ ನಿರಂತರವಾದ ವಿದ್ಯುತ್ ಪೂರೈಕೆಗೆ ಕ್ರಮ ಕೈಗೊಳ್ಳುವಂತೆ ಜೆಸ್ಕಾಂ ಇಲಾಖೆಯ ಎ.ಇ. ವೈದ್ಯಾನಾಥಸ್ವಾಮಿರವರಿಗೆ ಸೂಚಿಸಿದರು.

ಮಳೆಗಾಲ ಪ್ರಾರಂಭವಾಗಿರುವುದರಿಂದ ಕುಡಿಯುವ ನೀರು ಕಲುಷಿತವಾಗುವ ಸಾಧ್ಯತೆ ಹೆಚ್ಚಿರುತ್ತದೆ ಹಾಗೂ ಸಾಂಕ್ರಮಿಕ ಕಾಯಿಲೆಗಳು ಹರಡುವ ಸಾಧ್ಯತೆ ಹೆಚ್ಚಿರುವುದರಿಂದ ಅಗತ್ಯ ಕ್ರಮ ಕೈಗೊಳ್ಳುವಂತೆ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಔಷಾಧಿಗಳ ಕೊರತೆಯಾಗದಂತೆ ನೋಡಿಕೊಳ್ಳುವಂತೆ ತಾಲೂಕ ವೈದ್ಯಾಧಿಕಾರಿ ಡಾ.ಶರಣಬಸವರಾಜ ರವರಿಗೆ ಸೂಚಿಸಿದರು.

ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವ ಕಡೆ ಅತಿಥಿ ಶಿಕ್ಷಕರ ನೇಮಕಕ್ಕೆ ಕ್ರಮ ಕೈಗೊಳ್ಳುವಂತೆ ಹಾಗೂ ಫಲಿತಾಂಶ ಹೆಚ್ಚಳಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ತಾ.ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ.ಡಿ ರವರಿಗೆ ಸೂಚಿಸಿದರು

ಸಿರವಾರ ತಾಲೂಕು ಪಂಚಾಯಿತಿ ಇ.ಓ.ಶ್ರೀಧರಸ್ವಾಮಿ ಸೇರಿದಂತೆ ಮಾನ್ವಿ .ಸಿರವಾರ ತಾಲೂಕುಗಳ ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿ ತಮ್ಮ ಇಲಾಖೆಯ ಕುರಿತು ಮಾಹಿತಿ ನೀಡಿದರು.

## ಉಟಕನೂರು ಗ್ರಾಮದಲ್ಲಿನ ಅಂಬೇಡ್ಕರ್ ವೃತ್ತ ಮತ್ತು ಕನಕದಾಸರ ವೃತ್ತಕ್ಕೆ ಅಗತ್ಯ ರಕ್ಷಣೆ ನೀಡುವಂತೆ ಮನವಿ

ಯುವ ಮಾರ್ಗ ಸುದ್ದಿ

**ಮಾನ್ವಿ,ಜು.21–** ತಾಲೂಕಿನ ಉಟಕನೂರು ಗ್ರಾಮದಲ್ಲಿನ ಗ್ರಾಮಪಂಚಾಯಿತಿ ಕಚೇರಿಯಲ್ಲಿ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಗಳಿಗೆ ಗ್ರಾ.ಪಂ. ಸಿಬ್ಬಂದಿ ಶಿವುಕುಮಾರ ರವರ ಮೂಲಕ ಗ್ರಾಮದ ಸಿದ್ದಪ್ಪ ಮನವಿ ಸಲ್ಲಿಸಿ ಮಾತನಾಡಿ ಉಟಕನೂರು ಗ್ರಾಮದಲ್ಲಿನ ಡಾ.ಬಿ. ಆರ್.ಅಂಬೇಡ್ಕರ್ ವೃತ್ತ ಮತ್ತು ಕನಕದಾಸರ ವೃತ್ತ ಗಳಿಗೆ ಅಗತ್ಯ ರಕ್ಷಣೆ ನೀಡಬೇಕು ಹಾಗೂ ಮೂರ್ತಿ ಇರುವ ಸ್ಥಳದಲ್ಲಿ ಸಿಸಿ ಕ್ಯಾಮೆರಾ ಅಳವಡಿಸಬೇಕು ಹಾಗೂ ವೃತ್ತಗಳನ್ನು ಅಭಿವೃದ್ಧಿ ಪಡಿಸಿ ತಡೆಗೋಡೆ ಹಾಕಿಸುವಂತೆ ಕೋರಿದರು



ಶಿವರಾಜ,ಹನುಮಂತ, ಮರಿಬಸವರಾಜ್ ಭಜಂತ್ರಿ, ಭೀಮಪ್ಪ, ಮರಿಸ್ವಾಮಿ, ಶ್ರೀಶೈಲ, ಮರಿಬಸವ, ಮಂಜುನಾಥ, ಮರಿಬಸವ, ಅಭಿಷೇಕ,ನಾಗರಾಜ್, ಇತರರು ಇದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

9743497111 9743496111

# ನ್ಯಾಯಾಧೀಶರಾದ ಹೆಚ್ ಎ ಸಾತ್ವಿಕ್ ರಿಮ್ಸ್‌ಗೆ ದಿಢೀರ್ ಭೇಟಿ: ವೈದ್ಯರ ಹಾಜರಾತಿ ಪರಿಶೀಲನೆ

**ಯುವ ಮಾರ್ಗ ಸುದ್ದಿ**

**ರಾಯಚೂರು,ಜು.21**–ರಾಯಚೂರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿಮ್ಸ್)ಯ ಬೋಧಕ ಆಸ್ಪತ್ರೆಯ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದ ಹಿನ್ನೆಲೆಯಲ್ಲಿ, ಗೌರವಾನ್ವಿತ ಹಿರಿಯ ಶ್ರೇಣಿಯ ದಿವಾಣಿ ನ್ಯಾಯಾಧೀಶರು ಆಗಿರುವ ರಾಯಚೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಹೆಚ್ ಎ ಸಾತ್ವಿಕ್ ಅವರು ದಿಢೀರ್ ಆಸ್ಪತ್ರೆಗೆ ಭೇಟಿ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಹತ್ತಿರದ ಕೋರ್ಟ್ ಆವರಣದಿಂದ ಹೊರಟು ಮಧ್ಯಾಹ್ನ 2.40ರ ಸುಮಾರಿಗೆ ನೇರವಾಗಿ ರಿಮ್ಸ್‌ಗೆ ಆಗಮಿಸಿದ ನ್ಯಾಯಾಧೀಶರು, ಆಸ್ಪತ್ರೆಯ ಬೇರೆ ಬೇರೆ ವಿಭಾಗಗಳಿಗೆ ಭೇಟಿ ನೀಡಿದರಲ್ಲದೇ, ಆಸ್ಪತ್ರೆಯ ಪ್ರಾಂಗಣದಲ್ಲಿ ಕುಳಿತಿದ್ದ ರೋಗಿಗಳೊಂದಿಗೆ ಮಾತನಾಡಿ ಅವರ ಯೋಗಕ್ಷೇಮ ವಿಚಾರಿಸಿದರು. ಆಸ್ಪತ್ರೆಯಲ್ಲಿನ ವೈದ್ಯಕೀಯ ಸೌಕರ್ಯಗಳ ಬಗ್ಗೆ ಕೇಳಿ ಮಾಹಿತಿ ಪಡೆದರು.

ಮೊದಲಿಗೆ ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗಕ್ಕೆ ತೆರಳಿ ಅಲ್ಲಿದ್ದ ನರ್ಸ್ ಸಿಬ್ಬಂದಿಗೆ ಡ್ಯೂಟಿ ಡಾಕ್ಟರ್ ಎಲ್ಲಿದ್ದಾರೆ ಎಂದು ಕೇಳಿದರು. ವೈದ್ಯರು, ಆಪರೇಷನ್ ಥೇಟರ್‌ನಿಂದ ಆಗಮಿಸಿ ಇದೀಗ ಊಟಕ್ಕೆ ತೆರಳಿದ್ದಾರೆ ಎಂದು ಪ್ರತಿಕ್ರಿಯಿಸಿದರು.

ಮಕ್ಕಳ ಹೊರರೋಗಿಗಳ ವಿಭಾಗಕ್ಕೆ ತೆರಳಿ ಅಲ್ಲಿ ವೈದ್ಯರು ಇರುವುದನ್ನು ನ್ಯಾಯಾಧೀಶರು ಖಚಿತಪಡಿಸಿಕೊಂಡರು. ಬಳಿಕ ಎಲುವು ಮತ್ತು ಕೀಲು ವಿಭಾಗಕ್ಕೆ ತೆರಳಿದಾಗ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಮತ್ತು ಎಂಬಿಬಿಎಸ್ ಇಂಟರ್ನಿಗಳು ರೋಗಿಯೊಬ್ಬರಿಗೆ ಪ್ಲಾಸ್ಟರ್ ಹಾಕುತ್ತಿರುವುದನ್ನು ಗಮನಿಸಿ, ಯಾಕೆ ವೈದ್ಯರಿಲ್ಲವೇ? ಸಂಬಂಧಿಸಿದ ವೈದ್ಯರು ಇಲ್ಲದೇ ಪ್ಲಾಸ್ಟರ್ ಹಾಕಿ ರೋಗಿಗೆ ಏನಾದರು ಹೆಚ್ಚುಕಮ್ಮಿಯಾದರೆ ಯಾರು ಹೊಣೆ? ಎಂದು ನ್ಯಾಯಾಧೀಶರು ಪ್ರಶ್ನಿಸಿದರು. ವೈದ್ಯರು ಎಲ್ಲಿದ್ದಾರೆ? ಎಂದು ಕೇಳಿದರು.



ಬಳಿಕ ನ್ಯಾಯಾಧೀಶರು ಕಿವಿ-ಮೂಗು-ಗಂಟಲು (ಇಎನ್‌ಟಿ) ವಿಭಾಗ ಮತ್ತು ನೇತ್ರ ವಿಜ್ಞಾನ ವಿಭಾಗಗಳಿಗೆ ತೆರಳಿದಾಗ ಎರಡೂ ಕಡೆಗಳಲ್ಲೂ ವೈದ್ಯರು ಇರಲಿಲ್ಲ. ಎರಡೂ ಕಡೆಗಳಲ್ಲಿಯೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಮತ್ತು ಎಂಬಿಬಿಎಸ್ ಇಂಟರ್ನಿಗಳೇ ರೋಗಿಗಳನ್ನು ನೋಡುತ್ತಿರುವುದನ್ನು ನ್ಯಾಯಾಧೀಶರು ಖಚಿತಪಡಿಸಿಕೊಂಡರು. ಇಷ್ಟೊತ್ತಿನವರೆಗೆ ವೈದ್ಯರು ಇದ್ದರು ಇದೀಗ ಊಟಕ್ಕೆ ತೆರಳಿದ್ದಾರೆ ಎಂದು ಇಎನ್‌ಟಿ ಮತ್ತು ನೇತ್ರ ವಿಜ್ಞಾನ ವಿಭಾಗದಲ್ಲಿದ್ದ ಎಂಬಿಬಿಎಸ್ ಇಂಟರ್ನಿಗಳು ಪ್ರತಿಕ್ರಿಯಿಸಿದರು. ಬಳಿಕ ನ್ಯಾಯಾಧೀಶರು, ಚರ್ಮರೋಗ ವಿಭಾಗಕ್ಕೆ ತೆರಳಿದಾಗ ಅಲ್ಲಿಯು ಸಹ ವೈದ್ಯರು ಕಾಣಿಸದೇ ಇರುವುದನ್ನು ಕಂಡು ಅಸಮಾಧಾನ ವ್ಯಕ್ತಪಡಿಸಿದರು. ಇದೆ ವೇಳೆ, ನ್ಯಾಯಾಧೀಶರ ಬಳಿಗೆ ಆಗಮಿಸಿದ ನೇತ್ರ ವಿಜ್ಞಾನ ವಿಭಾಗದ ವೈದ್ಯರೊಬ್ಬರು ತಾವು ಕೆಲಸದ ಮೇಲೆ ಒಪೆಕ್ ಆಸ್ಪತ್ರೆಗೆ ಹೋಗಿದ್ದಾಗಿ ಹೇಳಿದರು.

ಜನರಲ್ ಸರ್ಜರಿ ವಿಭಾಗದಲ್ಲಿ ಒಬ್ಬ ವೈದ್ಯರು ರಜೆ ಮೇಲೆ ತೆರಳಿರುವುದನ್ನು ಮತ್ತೊಬ್ಬ ವೈದ್ಯರು ಊಟದ ಅವಧಿ ಮೂಗಿದರೂ ಬಾರದೇ ಇರುವುದನ್ನು ನ್ಯಾಯಾಧೀಶರು ತಿಳಿದುಕೊಂಡರು.

ಈ ಆಸ್ಪತ್ರೆಗೆ ಬಹುತೇಕ ಬಡ ಹಾಗೂ ಮಧ್ಯಮ ವರ್ಗದ ರೋಗಿಗಳೇ ಹೆಚ್ಚಾಗಿ ಬರುತ್ತಾರೆ. ಈ ಜನರಿಗೆ ಸರಿಯಾದ ವೈದ್ಯಕೀಯ ಚಿಕಿತ್ಸೆ ಕೊಡುವುದು ನಮ್ಮ ಜವಾಬ್ದಾರಿಯಾಗಿದೆ. ಎಲ್ಲ ವೈದ್ಯರು ಸರಿಯಾದ ಸಮಯಕ್ಕೆ ಆಸ್ಪತ್ರೆಗೆ ಬರಬೇಕು. ಊಟಕ್ಕೆ ತೆರಳಿದ್ದಲ್ಲಿ ಬೇಗನೇ ಕರ್ತವ್ಯಕ್ಕೆ ಆಗಮಿಸಬೇಕು. ವೈದ್ಯರಿಗಾಗಿ ರೋಗಿಗಳು ಕಾಯುತ್ತಿರುತ್ತಾರೆ ಎಂಬುದರ ಬಗ್ಗೆ ಪ್ರತಿಯೊಬ್ಬ ವೈದ್ಯರು ಅರಿಯಬೇಕು. ಜನರಿಗೆ ಯಾವುದೇ ಕಾರಣಕ್ಕು ತೊಂದರೆಯಾಗಬಾರದು ಎಂಬುದು ನಮ್ಮ ಕಾಳಜಿಯಾಗಿದೆ. ರಾಯಚೂರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿಮ್ಸ್)ಯ ಬೋಧಕ ಆಸ್ಪತ್ರೆಯ ಬಗ್ಗೆ ಜನರಿಗೆ ವಿಶ್ವಾಸ ಬರುವ ಹಾಗೆ ಎಲ್ಲ ವೈದ್ಯರು ಕಾರ್ಯನಿರ್ವಹಿಸಬೇಕು ಎಂದು ನ್ಯಾಯಾಧೀಶರು ಸ್ಥಳದಲ್ಲಿದ್ದ ಆಸ್ಪತ್ರೆಯ ಅಧಿಕಾರಿಗಳಿಗೆ ಸಲಹೆ ಮಾಡಿದರು.

ಈ ಸಂದರ್ಭದಲ್ಲಿ ಉಪ ವೈದ್ಯಕೀಯ ಅಧೀಕ್ಷಕರಾದ ಡಾ.ಅರವಿಂದ ಸಂಗಾವಿ, ಆಸ್ತಿ ವಿಭಾಗದ ಅಧಿಕಾರಿ ಬಸವರಾಜ, ಮಕ್ಕಳ ತಜ್ಞ ವೈದ್ಯರಾದ ಡಾ.ಗೋಪಾಲ, ಮಕ್ಕಳ ಹೊರರೋಗಿ ವಿಭಾಗದ ಡಾ.ಪ್ರಕಾಶ ಹಾಗೂ ಇನ್ನೀತರರು ಇದ್ದರು.

# ರಾಯಚೂರ ಜಿಲ್ಲೆಯಲ್ಲಿ ಯುವ ಜನರಿಗಾಗಿ ನಗರ-ನಗರಕ್ಕಾಗಿ ಯುವಕರು ವಿನೂತನ ಕಾರ್ಯಕ್ರಮಕ್ಕೆ ಚಾಲನೆ



**ಯುವ ಮಾರ್ಗ ಸುದ್ದಿ**

**ರಾಯಚೂರು,ಜು.21**– ರಾಯಚೂರು ಜಿಲ್ಲೆಯ ಯುವಕರನ್ನು ಸಕಾರಾತ್ಮಕವಾಗಿ ಸಕ್ರಿಯಗೊಳಿಸಲು ಯೋಜಿಸಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಯೋಗದೊಂದಿಗೆ ರಾಯಚೂರು ಮಹಾನಗರ ಪಾಲಿಕೆಯು ವಿನೂತನವಾಗಿ ರೂಪಿಸಿರುವ ಯುವಜನರಿಗಾಗಿ ನಗರ-ನಗರಕ್ಕಾಗಿ ಯುವಕರು (ಸಿಟಿ ಫಾರ್ ಯೂಥ್ ಅಂಡ್ ಯೂಥ್ ಫಾರ್ ಸಿಟಿ) ಕಾರ್ಯಕ್ರಮಕ್ಕೆ ಜುಲೈ 20ರಂದು ವಿದ್ಯುಕ್ತ ಚಾಲನೆ ಸಿಕ್ಕಿತು.

ಯುವಜನರಿಗಾಗಿ ನಗರ – ನಗರಕ್ಕಾಗಿ ಯುವಕರು ಬ್ಯಾನರಡಿ ಜುಲೈ 20 ರಿಂದ ಅಕ್ಟೋಬರ್‌ವರೆಗೆ 10 ನಾನಾ ಕಾರ್ಯಕ್ರಮಗಳು ನಡೆಯಲಿದ್ದು, ಈ ಉಪಕ್ರಮದ ಮೊದಲ ಭಾಗವಾಗಿ ಜುಲೈ 20ರಂದು ನಡೆದ ಗಬ್ಬೇರು ಬೆಟ್ಟ ಚಾರಣಕ್ಕಾಗಿ ಬೆಳ್ಳಂ ಬೆಳಗ್ಗೆಯೇ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಸೇರಿದ್ದು ಕಂಡು ಬಂದಿತು.

ಸಣ್ಣ ನೀರಾವರಿ ಮತ್ತು ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಬೆಳಗಿನ ವಾಯುವಿಹಾರದ ವಸ್ತ್ರಧರಿಸಿ ಕಾರ್ಯಕ್ರಮದಲ್ಲಿ ಭಾಗಿಯಾಗಿ ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಹಸಿರು ನಿಶಾನೆ ತೋರುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಸಚಿವರು, ಅಧಿಕಾರಿಗಳು ಜನಪರ ಕಾಳಜಿ ಇಟ್ಟುಕೊಂಡು ಯೋಚಿಸಿದಲ್ಲಿ ಹೊಸ ಬಗೆಯ ಕಾರ್ಯಕ್ರಮಗಳನ್ನು ರೂಪಿಸಬಹುದಾಗಿದೆ. ಆ ಕೆಲಸವನ್ನು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಾಪತ್ರ ಅವರು ಮಾಡುತ್ತಿದ್ದಾರೆ. ಯುವಜನರಿಗಾಗಿ ನಗರ – ನಗರಕ್ಕಾಗಿ ಯುವಕರು ಎನ್ನುವ ಥೀಮ್‌ನೊಂದಿಗೆ ರೂಪಿಸಿರುವ ಇಂತಹ ಕಾರ್ಯಕ್ರಮಗಳು ರಾಯಚೂರ ನಗರಕ್ಕೆ ಅತೀ ಅವಶ್ಯವಿತ್ತು. ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ಯುವಕರು ಸಕ್ರಿಯ ಭಾಗಿಯಾಗಬೇಕು. ಈ ಕಾರ್ಯಕ್ರಮ ಯಶ ಕಾಣಲಿದೆ ಎಂದು ತಿಳಿಸಿದರು.

ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಾಪತ್ರ ಅವರು ಮಾತನಾಡಿ, ರಾಯಚೂರ ಜಿಲ್ಲೆಯಲ್ಲಿ ಉತ್ತಮವಾದ ಪರಿಸರವಿದೆ. ಇಲ್ಲಿನ ಯುವಕರು ಸಧೃಢ ಕಾಯ ಹೊಂದಿದವರಾಗಿದ್ದು ಉತ್ತಮವಾದ ಯೋಚನೆಗಳನ್ನು ಅವರ ಮನಸಿನಲ್ಲಿ ಬಿತ್ತಬೇಕಿದೆ. ಈ ನಿಟ್ಟಿನಲ್ಲಿ ಯೋಚಿಸಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಯೋಗದೊಂದಿಗೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಮಹಾನಗರ ಪಾಲಿಕೆಯಿಂದ ಜುಲೈ 20 ರಿಂದ ಅಕ್ಟೋಬರ್‌ವರೆಗೆ 10ರವರೆಗೆ ನಡೆಯುವ ಎಲ್ಲ ಕಾರ್ಯಕ್ರಮಗಳಲ್ಲಿ ಜಿಲ್ಲೆಯ ಯುವಕರು ಭಾಗಿಯಾಗಬೇಕು ಎಂದು ಮನವಿ ಮಾಡಿದರು.

**ಗಮನ ಸೆಳೆದ ಚಾರಣ:** ಯುವಜನರಿಗಾಗಿ ನಗರ – ನಗರಕ್ಕಾಗಿ ಯುವಕರು ಚಾಲನಾ ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆಯ ಸದಸ್ಯರು, ಗಣ್ಯರು, ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ನೆರದು ಕಾರ್ಯಕ್ರಮದ ಮೆರುಗು ಹೆಚ್ಚಿಸಿದರು. ಇದರ ಭಾಗವಾಗಿ ನಡೆದ ಚಾರಣದಲ್ಲಿ ಭಾಗಿಯಾದ ಯುವಕರು, ಸಾರ್ವಜನಿಕರು ಉತ್ಸಾಹದಿಂದ ಬೆಟ್ಟ ಏರಿ ಗ್ರೂಪ್ ಫೋಟೊ ತೆಗೆಯಿಸಿಕೊಂಡು ಸಂತಸ ವ್ಯಕ್ತಪಡಿಸಿದರು.

**ಕ್ಯಾಲೆಂಡರ್ ಬಿಡುಗಡೆ:** ಯುವಜನರಿಗಾಗಿ ನಗರ – ನಗರಕ್ಕಾಗಿ ಯುವಕರು ಕಾರ್ಯಕ್ರಮವು ಒಟ್ಟು 3 ತಿಂಗಳಿನ ಕಾರ್ಯಕ್ರಮವಾಗಿದ್ದು ರಾಯಚೂರು ಮಹಾನಗರ ಪಾಲಿಕೆಯಿಂದ ಜುಲೈ 20 ರಿಂದ ಅಕ್ಟೋಬರ್‌ವರೆಗೆ 10 ವಿವಿಧ ಕ್ರೀಡೆಗಳು, ಆಡಳಿತದೊಂದಿಗೆ ಸಂವಹನ ಮತ್ತು ಪ್ರತಿಭಾ ಸ್ಪರ್ಧೆಗಳು ಹಾಗೂ ಕಾರ್ಯಕ್ರಮಗಳು ನಡೆಯಲಿದ್ದು ಇದಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳ ಪಟ್ಟಿಯ ಕ್ಯಾಲೆಂಡರನ್ನು ಇದೆ ವೇಳೆ ಬಿಡುಗಡೆ ಮಾಡಲಾಯಿತು.

**ಕಿಟ್ ವಿತರಣೆ:** ಇದೆ ಸಂದರ್ಭದಲ್ಲಿ 10 ಜನ ಪೌರ ಕಾರ್ಮಿಕರಿಗೆ ಅಡುಗೆ ಸಲಕರಣೆಗಳನ್ನು ಒಳಗೊಂಡ ಕಿಟ್‌ಗಳನ್ನು ಸಾಂಕೇತಿಕವಾಗಿ ವಿತರಣೆ ಮಾಡಲಾಯಿತು.

ಸಮಾರಂಭದಲ್ಲಿ ಮಹಾನಗರ ಪಾಲಿಕೆಯ ಪ್ರಭಾರ ಅಧ್ಯಕ್ಷರಾದ ಜೆ ಸಾಜಿದ್ ಸಮೀರ್, ಮಹಾನಗರ ಪಾಲಿಕೆಯ ಸದಸ್ಯರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿ ವೀರೇಶ್ ನಾಯಕ, ಸೇರಿದಂತೆ ಇನ್ನೀತರರು ಇದ್ದರು.

# ಲಿಂಗಸೂರನಲ್ಲಿ ಅಕ್ಕ ಕೆಫೆ ವೀಕ್ಷಣೆ ಮಾಡಿದ ಜಿಪಂ ಸಿಇಓ

**ಯುವ ಮಾರ್ಗ ಸುದ್ದಿ**

**ರಾಯಚೂರು,ಜು.21**–ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕಾಂದೂ ಅವರು ಲಿಂಗಸೂಗೂರು ತಾಲೂಕಿಗೆ ತೆರಳಿ ಅಲ್ಲಿನ ತಾಲೂಕು ಪಂಚಾಯತಿ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಅಕ್ಕ ಕೆಫೆಯ ವೀಕ್ಷಣೆ ನಡೆಸಿದರು.



ಸ್ವ-ಸಹಾಯ ಗುಂಪಿನ ಮಹಿಳಾ ಸದಸ್ಯರೇ ಅಕ್ಕ ಕೆಫೆ ನಿರ್ವಹಣೆ ಮಾಡಬೇಕು. ತಾಲೂಕು ಪಂಚಾಯತ್ ಕಾರ್ಯನಿರ್ವಾಹ ಅಧಿಕಾರಿಗಳೊಂದಿಗೆ ಎನ್‌ಆರ್‌ಎಲ್‌ಎಂ ಸಿಬ್ಬಂದಿಯು ಸಭೆ ಮಾಡಿ ಊಟ ಮತ್ತು ಉಪಹಾರದ ದರಪಟ್ಟಿ ನಿಗದಿ ಮಾಡಿಕೊಳ್ಳಬೇಕು ಎಂದು ಸಿಇಓ ಅವರು ಸೂಚನೆ ನೀಡಿದರು. ಈ ಕೆಫೆಯಲ್ಲಿ ದೂಮಪಾನ, ಮದ್ಯಪಾನ ಮಾಡದಂತೆ ಕಟ್ಟುನಿಟ್ಟಿನ ಕ್ರಮವಹಿಸಬೇಕು. ಸಿ.ಸಿ ಟಿವಿ ಕ್ಯಾಮರಾ, ಬೆಂಕಿ ನಿಯಂತ್ರಣ ಯಂತ್ರ ಅಳವಡಿಸಬೇಕು. ಅಕ್ಕ ಕೆಫೆ ನಿರ್ವಹಣೆ ಮಾಡಲು ನೀಡಿರುವ ಕಟ್ಟಡಕ್ಕೆ ಬಾಡಿಗೆ ನಿಗದಿಪಡಿಸುವಂತೆ ಸೂಚಿಸಿದರು.

ಅಕ್ಕ ಕೆಫೆಯ ಮುಖ್ಯ ಬಾಗಿಲಿನ ಮುಂದೆ ಮೇಲ್ಛಾವಣೆಯ ನೀರು ಬೀಳುವುದನ್ನು ತಪ್ಪಿಸಿ ಹಿಂಭಾಗದಲ್ಲಿ ಪೈಪು ಅಳವಡಿಸಿ ನೀರು ಹರಿಬಿಡಬೇಕು ಎಂದು ಸಿಇಓ ಅವರು ಸಲಹೆ ಮಾಡಿದರು. ಈ ಕೆಫೆ ನಿರ್ವಹಣೆಯನ್ನು ಮಾಡಲು ಪುರುಷರಿಗೆ ಅವಕಾಶವಿರುವುದಿಲ್ಲ ಎಂಬುದರ ಬಗ್ಗೆ ತಿಳಿಯಬೇಕು ಎಂದು ಸಿಇಓ ಅವರು ತಿಳಿಸಿದರು.

ಅಕ್ಕ ಕೆಫೆಯ ಉದ್ಘಾಟನೆ ಮಾಡುವ ಮುಂಚಿತವಾಗಿ ಸ್ವ-ಸಹಾಯ ಗುಂಪಿನ ಸದಸ್ಯರಿಗೆ ತರಬೇತಿ ನೀಡಬೇಕು ಹಾಗೂ ಅಕ್ಕ ಕೆಫೆಯನ್ನು 15 ದಿನದೊಳಗೆ ಉದ್ಘಾಟನೆ ಮಾಡುವಂತೆ ಸಿಇಓ ಅವರು ನಿರ್ದೇಶನ ನೀಡಿದರು.

ವಿಶೇಷ ಮಹಿಳೆಯರಿಗೆ ಕೆಫೆ ನಿರ್ವಹಣೆ ಮಾಡುವ ವ್ಯವಸ್ಥೆ ಮಾಡಬೇಕು. ಸುಮಾರು 2 ರಿಂದ 3 ಎಸ್‌ಎಚ್‌ಜಿಯವರಿಂದ ಅಕ್ಕ ಕೆಫೆ ನಿರ್ವಹಣೆ ಮಾಡಬೇಕು. ಸ್ಥಳೀಯವಾಗಿ ತಯಾರಿಸುವ ವೆಜ್ ನಾನ್ ವೆಜ್ ಉಪಹಾರಗಳನ್ನು ಸಿದ್ಧಪಡಿಸುವಂತೆ ಸೂಚಿಸಿದರು.

ಅಕ್ಕ ಕೆಫೆ ನಿರ್ವಹಣೆ ಮಾಡುವ ಸದಸ್ಯರು ಸಮವಸ್ತ್ರದೊಂದಿಗೆ ಕೆಫೆಯಲ್ಲಿ ಕಾರ್ಯನಿರ್ವಹಿಸಬೇಕು. ಈ ಕೆಫೆ ನಿರ್ವಹಣೆ ಮಾಡುವ ಗುಂಪು ಹಾಗೂ ತಾಲೂಕು ಪಂಚಾಯತ್ ನಡುವೆ ಒಪ್ಪಂದ ಮಾಡಿಕೊಳ್ಳಬೇಕು ಎಂದು ಸಿಇಓ ಅವರು ತಿಳಿಸಿದರು.

ಈ ವೇಳೆ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಡ್ಡಿಪಿಆರ್ ಸಹಾಯಕ ನಿರ್ದೇಶಕರು, ತಾಲೂಕು ಯೋಜನಾಧಿಕಾರಿಗಳು, ತಾಲೂಕ ಪಂಚಾಯತ್ ಮತ್ತು ಎನ್‌ಆರ್‌ಎಲ್‌ಎಂ ಸಿಬ್ಬಂದಿ ಹಾಜರಿದ್ದರು.

# ಬಹುಗ್ರಾಮ ನೀರು ಸರಬರಾಜು ಯೋಜನೆಯ ಕಾಮಗಾರಿ ಪರಿಶೀಲಿಸಿದ ಜಿಪಂ ಸಿಇಓ ಈಶ್ವರ್ ಕಾಂದೂ

**ಯುವ ಮಾರ್ಗ ಸುದ್ದಿ**

**ರಾಯಚೂರು,ಜು.21**– ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕಾಂದೂ ಅವರು ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ಚಿತ್ತಾಪೂರು, ನರಕಲದಿನ್ನಿ ಹಾಗೂ ಮುದಗಲ್ ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.



ಲಿಂಗಸುಗೂರು ತಾಲೂಕಿನ ಚಿತ್ತಾಪುರ ಗ್ರಾಮ ಪಂಚಾಯತಿಯ ಜಾವೂರು ಗ್ರಾಮದ ಬಹುಗ್ರಾಮ ಕುಡಿಯುವ ನೀರಿನ ಕಾಮಗಾರಿ ಸ್ಥಳವಾದ ನಾರಯಣಪುರ ಆಣೆಕಟ್ಟಿಗೆ ತೆರಳಿ ಸಿಇಓ ಅವರು ಕಾಮಗಾರಿ ವೀಕ್ಷಣೆ ನಡೆಸಿದರು. ಪ್ರಗತಿ ಹಂತದಲ್ಲಿರುವ 160 ಎಂಎಲ್‌ಡಿ ಸಾಮರ್ಥ್ಯದ ನೀರಿನ ಶುದ್ಧೀಕರಣ ಘಟಕ ಹಾಗೂ ಕ್ಲಾರಿಫ್ಲೋಕುಲೇಟರ್ ಘಟಕಗಳನ್ನು ಪರಿಶೀಲಿಸಿದರು. ಇದೆ ವೇಳೆ ಸಸಿ ನೆಟ್ಟರು.

ನಾರಾಯಣಾಪುರ ಅಣೆಕಟ್ಟಿಗೆ ತೆರಳಿ ಜಾಕ್‌ವೆಲ್ ಕಮ್ ಪಂಪ್‌ಹೌಸ್ ಡಿಸೈನ್ ಹಾಗೂ ಕಾಮಗಾರಿ ಪ್ರಗತಿಯ ಕುರಿತು ಇದೆ ವೇಳೆ ಸಿಇಓ ಅವರು ಮಾಹಿತಿ ಪಡೆದರು.

ಮುಂದುವರೆದು ಮುದಗಲ್ ಗ್ರಾಮದ ಸ್ಟಾಕ್ ಯಾರ್ಡ್ ಕ್ಯಾಂಪ್‌ಗೆ ಭೇಟಿ ನೀಡಿ ಬಹುಗ್ರಾಮ ಕುಡಿಯುವ ನೀರಿನ ವಿವಿಧ ಘಟಕಗಳ ಕಾಮಗಾರಿಗಳ ಪ್ರಗತಿ ಪರಿಶೀಲನೆ ಕೈಗೊಂಡು ಎಸ್‌ಎನ್‌ಸಿ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಅನುಷ್ಠಾನಗೊಳಿಸಿ ಪೂರ್ಣಗೊಳಿಸಲು ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.ಸ. ಉಪವಿಭಾಗದ ಅಬಿಯಂತರರು, ಪಿಎಂಸಿ ಮತ್ತು ಎಸೆನ್‌ಸಿ ಸಂಸ್ಥೆಯ ಮುಖ್ಯಸ್ಥರು ಹಾಜರಿದ್ದರು.

# ಚಿಲ್ಡ್ರನ್ ಇಸ್ಲಾಮಿಕ್ ಆರ್ಗನೈಝೇಷನ್ ಆಫ್ ಇಂಡಿಯಾ ವತಿಯಿಂದ ಗಿಡ ನೆಡುವ ಕಾರ್ಯಕ್ರಮ




**ಯುವ ಮಾರ್ಗ ಸುದ್ದಿ**

**ಮಾನ್ವಿ,ಜು.21**–ಪಟ್ಟಣದಲ್ಲಿ ಚಿಲ್ಡ್ರನ್ ಇಸ್ಲಾಮಿಕ್ ಆರ್ಗನೈಝೇಷನ್ ಆಫ್ ಇಂಡಿಯಾ ವತಿಯಿಂದ ಗಿಡನೇಡುವ ಕಾರ್ಯಕ್ರಮಕ್ಕೆ ಸಿ.ಐ.ಒ.ಜಿಲ್ಲಾಧ್ಯಕ್ಷೆ ನಾಜೀಯ ಬೇಗಾಂ ಚಾಲನೆ ನೀಡಿ ಮಾತನಾಡಿ ಚಿಲ್ಡ್ರನ್ ಇಸ್ಲಾಮಿಕ್ ಆರ್ಗನೈಝೇಷನ್ ಆಫ್ ಇಂಡಿಯಾ ಮಕ್ಕಳ ರಾಷ್ಟ್ರೀಯಸಂಘಟನೆಯಾಗಿದ್ದು ಸಂಸ್ಥೆಯು 5 ರಿಂದ 12 ವರ್ಷ ವಯಸ್ಸಿನ ಮಕ್ಕಳಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಅಯೋಜಿಸುವ ಮೂಲಕ ಮಕ್ಕಳಲ್ಲಿನ ಪ್ರತಿಭೆಯನ್ನು ಹೊರಹೊಮ್ಮಿಸುವುದಕ್ಕೆ ,ಧಾರ್ಮಿಕ ಮೌಲ್ಯಗಳನ್ನು ಬೆಳೆಸುವುದಕ್ಕೆ ಶ್ರಮಿಸುತ್ತಿದೆ ಜೂಲೈ 26 ರವರೆಗೆ ಮಣ್ಣಿನಲ್ಲಿ ಕೈಗಳು ಭಾರತದೊಂದಿಗೆ ಹೃದಯಗಳು ಹೆಸರಿನಲ್ಲಿ ಪರಿಸರ ಸಂರಕ್ಷಣೆಯ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಪಟ್ಟಣದ ವಿವಿಧ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಆರಾಧನೆ ಸ್ಥಳಗಳಗಳಲ್ಲಿ ಮಕ್ಕಳು ಗಿಡಗಳನ್ನು ನೆಟ್ಟರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮಕ್ಕಳಿಂದ ಪರಿಸರ ಜಾಗೃತಿ ಜಾಥ ನಡೆಯಿತು.

ಮಕ್ಕಳ ತಜ್ಞರಾದ ಡಾ.ಸಜ್ಜಾದ್ ಸಾಬ್ ,ಸ್ಥಾನಿಯ ಅಧ್ಯಕ್ಷರಾದ ಅಬ್ದುಲ್ ರೆಹಮಾನ್ ಸಾಬ್, ಕಾರ್ಯದರ್ಶಿ ಮರಿಯಮ್ ಅಂಜುಮ್, ಮೇಲ್ವಿಚಾರ ಕರಾದ ಅಜ್ರಾ ಅಮೇನು, ಗುಲ್ ನಾಜ್, ಜೀನತ್,ಖಮ್ರುನ್ನಿಸಾ,ಆಯಿಷಾ, ಯಾಸ್ಮೀನ್, ಜನಾಬ್ ಸಬ್ಜಲಿ ಸಾಬ್,ಜೆ.ಐ.ಹೆಚ್. ಕಾರ್ಯಕರ್ತರಾದ ಅಬ್ದುಲ್ ಖಯ್ಯುಮ್ ಸೇರಿದಂತೆ ಇನ್ನಿತರರು ಇದ್ದರು.

# ಕೆಲ ತಿಂಗಳಲ್ಲಿ ಖರ್ಗೆ ಪ್ರಧಾನಿ

**ಹುಬ್ಬಳ್ಳಿ,ಜು.21**–ಇನ್ನು ಕೆಲವೇ ತಿಂಗಳಲ್ಲಿ ಮಲ್ಲಿಕಾರ್ಜುನ ಖರ್ಗೆಯವರು ಪ್ರಧಾನಮಂತ್ರಿ ಆಗಬಹುದು ಎಂದು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ್ ರಾಯರೆಡ್ಡಿ ಹೇಳಿದ್ದಾರೆ. ನಗರದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಲ್ಲಿಕಾರ್ಜುನ ಖರ್ಗೆಯವರ ಬಗ್ಗೆ ಬಿಜೆಪಿ ನಾಯಕರು ಏನೇನೋ ಮಾತನಾಡಿದ್ದಾರೆ.

ಆದರೆ ಖರ್ಗೆಯವರು ಓರ್ವ ಹಿರಿಯ ನಾಯಕರಿದ್ದು ಯಾರೂ ಅವರನ್ನು ಮ್ಯಾಚ್ ಮಾಡಲು ಆಗದು ಎಂದರು.ಕೆಲವೇ ತಿಂಗಳಲ್ಲಿ ಮೋದಿ ಅವರಿಗೆ 75 ವರ್ಷ ಆಗುತ್ತದೆ. ಆರ್.ಎಸ್.ಎಸ್. ಹೇಳಿದಂತೆ ಮೋದಿ ಅಧಿಕಾರದಿಂದ ಕೆಳಗಿಳಿಯಬಹುದು. ಬಿಜೆಪಿಗೆ ಲೋಕಸಭೆಯಲ್ಲಿ ಬಹುಮತ ಇಲ್ಲ ಚಂದ್ರಬಾಬುನಾಯ್ಡು, ನಿತೀಶ್ ಕುಮಾರ್ ಬೆಂಬಲ ಹಿಂಪಡೆದರೆ ಕೇಂದ್ರ ಸರ್ಕಾರ ಬೀಳಬಹುದು. ಆಗ ಕಾಂಗ್ರೆಸ್ ಅಧಿಕಾರಕ್ಕೆ ಬರಬಹುದು.ರಾಹುಲ್ ಗಾಂಧಿಯವರಿಗೆ ಮೊದಲ ಅವಕಾಶವಿದ್ದು ಮಲ್ಲಿಕಾರ್ಜುನ ಖರ್ಗೆಯವರು ಪ್ರಧಾನಿ ಆದರೂ ಅಚ್ಚರಿ ಇಲ್ಲ ಎಂದವರು ನುಡಿದರು.ರಾಜ್ಯದಲ್ಲಿ ಯಾವುದೇ ಸಪ್ಟೆಂಬರ್ ಕ್ರಾಂತಿ ಆಗದು ಎಂದು ರಾಯರೆಡ್ಡಿ ನುಡಿದರು.

ಯುವ ಮಾರ್ಗ



# ಬಿಸಿಎಂ ವಸತಿ ನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

**ರಾಯಚೂರು,ಜು.21–**ಇಲ್ಲಿನ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2025–26ನೇ ಸಾಲಿಗೆ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರ ಬಾಲಕ, ಬಾಲಕಿಯರ ವಸತಿ ನಿಲಯಕ್ಕೆ ಆನ್‌ಲೈನ್ ಮೂಲಕ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ವಸತಿ ನಿಲಯಗಳಿಗೆ ಸಾಮಾನ್ಯ ಪದವಿ ಕೋರ್ಸಿನ ವಿದ್ಯಾರ್ಥಿಗಳಿಂದ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, ಎಎಸ್.ಸಿ & ಎಸ್,ಟಿ 2.50 ಲಕ್ಷಹಾಗೂ ಪ್ರವರ್ಗ–2ಎ, 2ಬಿ, 3ಎ 3ಬಿ ಇತರೇ ಹಿಂದುಳಿದ ವರ್ಗ ವಿದ್ಯಾರ್ಥಿಗಳ ವಾರ್ಷಿಕ ಆದಾಯವು 1 ಲಕ್ಷ ರೂ.ಗಳುಯೊಳಗೆ ಇರಬೇಕು.

ಆಸಕ್ತರು https://shp.karnataka.gov.in ನಲ್ಲಿ ಆಗಸ್ಟ್ 14 ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ತಾಲೂಕುವಾರು ವಿದ್ಯಾರ್ಥಿಗಳ ವಿವರ ಹಾಗೂ ವಿದ್ಯಾರ್ಥಿ ನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ https:// shp.karnataka.gov.in ನ್ನು ನೋಡಬಹುದು.

ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ: bcw.hostels@karnataka.gov.in ಗೆ ಇ–ಮೇಲ್ ಮುಂಖಾಂತರ ಅಥವಾ ತಾಲೂಕ ಕಲ್ಯಾಣಾಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ರಾಯಚೂರು ದೂರವಾಣಿ ಸಂ: 08532–221072ಗೆ ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ತಾಲೂಕ ಕಲ್ಯಾಣಾಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿ.ಜಿ ಕುಲ್ಕರ್ಣಿ ಅಸ್ಪತ್ರೆ ಹತ್ತಿರ ಅನೀರಿಕ್ಷಿತ ಮನೆ ಅಜಾದ್ ನಗರ ಕಾಲೋನಿ ರಾಯಚೂರು ದೂರವಾಣಿ ಸಂಖ್ಯೆ : 08532–221072ಗೆ ಸಂಪರ್ಕ ಮಾಡಬಹುದಾಗಿದೆ ಎಂದು ತಾಲೂಕು ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬೀದಿನಾಟಕ, ಜಾನಪದ ಸಂಗೀತ ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸಲು ಜುಲೈ 24 ಕೊನೆಯ ದಿನ

**ರಾಯಚೂರು,ಜು.21–** ರಾಯಚೂರಿನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಸರ್ಕಾರದ ಯೋಜನೆಗಳು, ಸಾಧನೆಗಳ ಕುರಿತು ಬೀದಿ ನಾಟಕ, ಜಾನಪದ ಸಂಗೀತ ಕಾರ್ಯಕ್ರಮಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ ಬೀದಿನಾಟಕ, ಜಾನಪದ ಸಂಗೀತ ಕಲಾ ತಂಡಗಳನ್ನು ಆಯ್ಕೆ ಮಾಡಿಕೊಳ್ಳುವ ಸಂಬಂಧ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಜುಲೈ 24 ಕೊನೆಯ ದಿನವಾಗಿದೆ.

ರಾಯಚೂರು ಜಿಲ್ಲೆಯಿಂದ 3 ಬೀದಿನಾಟಕ ಹಾಗೂ 3 ಜಾನಪದ ಸಂಗೀತ ಕಲಾ ತಂಡಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು. ಪ್ರತಿ ಬೀದಿನಾಟಕ ತಂಡದಲ್ಲಿ 8 ಜನ ಕಲಾವಿದರಿದ್ದು, ಅದರಲ್ಲಿ ಕಡ್ಡಾಯವಾಗಿ ಇಬ್ಬರು ಮಹಿಳೆಯರು ಹಾಗೂ ಒಬ್ಬರು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸೇರಿದ ಕಲಾವಿದರಿರಬೇಕು. ಪ್ರತಿ ಜಾನಪದ ಸಂಗೀತ ಕಲಾ ತಂಡದಲ್ಲಿ 3 ಜನ ಕಲಾವಿದರಿದ್ದು, ಅದರಲ್ಲಿ ಕಡ್ಡಾಯವಾಗಿ ಒಬ್ಬರು ಮಹಿಳೆಯರು ಹಾಗೂ ಒಬ್ಬರು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸೇರಿದ ಕಲಾವಿದರಿರಬೇಕು. ಈ ಹಿಂದೆ ವಿವಿಧ ಇಲಾಖೆಗಳ ಜಾಗೃತಿ ಕಾರ್ಯಕ್ರಮಗಳನ್ನು ಮಾಡಿರುವ ಅನುಭವ ಹೊಂದಿರಬೇಕು. ಬೀದಿನಾಟಕ ತಂಡವು ನೋಂದಾಯಿತ ತಂಡವಾಗಿರಬೇಕು.

ನಿಗದಿತ ಅರ್ಜಿ ನಮೂನೆಯನ್ನು ಹಿರಿಯ ಸಹಾಯಕ ನಿರ್ದೇಶಕರ ಕಚೇರಿ, 1ನೇ ಮಹಡಿ, ಪತ್ರಿಕಾಭವನ, ರಂಗಮಂದಿರ ಹಿಂಭಾಗ, ರಾಯಚೂರು ಇವರಿಂದ ಉಚಿತವಾಗಿ ಪಡೆದು ಭರ್ತಿ ಮಾಡಿದ ಅರ್ಜಿಯೊಂದಿಗೆ ಅಗತ್ಯ ದಾಖಲಾತಿಗಳನ್ನು ಲಗತ್ತಿಸಿ ಜುಲೈ 24ರ ಒಳಗಾಗಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಯ ಲಿಂಗರಾಜ್ ಮೊಬೈಲ್ ಸಂಖ್ಯೆ: 9743892080, ಎ.ಪ್ರಕಾಶ್ ಮೊಬೈಲ್ ಸಂಖ್ಯೆ: 9035063156ಗೆ ಸಂಪರ್ಕ ಮಾಡಬಹುದಾಗಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಸುಲೈಮಾನ್ ನದಾಫ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಬಕಾರಿ ದಾಳಿ: ಕಳ್ಳಭಟ್ಟಿ ಸರಾಯಿ ವಶಕ್ಕೆ



**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು,ಜು.21–** ತಾಲೂಕಿನ ಅಡವಿಭಾವಿ ಗ್ರಾಮದಲ್ಲಿ ಅಬಕಾರಿ ಪೋಲಿಸರು ದಾಳಿ ಮಾಡಿ 7 ಲೀಟರ್ ಕಳ್ಳಭಟ್ಟಿ ಸರಾಯಿ ಮತ್ತು ಆರೋಪಿಯನ್ನು ವಶಪಡಿಸಿಕೊಂಡಿದ್ದಾರೆ. ಈಚಿನಾಳ ತಾಂಡದ ಹೀರಾಲಾಲ್ ಎನ್ನುವ ಆರೋಪಿ ಮನೆಯಲ್ಲಿ ಕಳ್ಳಭಟ್ಟಿ ತಯಾರು ಮಾಡುತ್ತಿದ್ದ ಖಚಿತ ತಿ ಪಡೆದ ಅಧಿಕಾರಿಗಳು ದಾಳಿ ನಡೆಸಿ 7 ಲೀಟರ್ ಕಳ್ಳಭಟ್ಟಿ ಸರಾಯಿ ಮತ್ತು ಮದ್ದೆಗಳನ್ನು ವಶಕ್ಕೆ ಪಡೆದುಕೊಂಡು ಪ್ರಕರಣ ದಾಖಲಿಸಿದ್ದಾರೆ.ಈ ಸಂದರ್ಭದಲ್ಲಿ ಅಬಕಾರಿ ನಿರೀಕ್ಷಕಿ ಸರಸ್ವತಿ, ಸಬ್ ಇನ್ಸ್‌ಪೆಕ್ಟರ್ ಮಹ್ಮದ್ ಹುಸೇನ್ ಸೇರಿ ಇತರರು ಇದ್ದರು

# ಗೋರ್ಕಲ್ ಶಾಲೆಯಲ್ಲಿ ಪೌಷ್ಟಿಕತೆ ಆಹಾರದ ಕುರಿತು ವಿದ್ಯಾರ್ಥಿಗಳಿಗೆ ಜಾಗೃತಿ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಜು.21–** ತಾಲೂಕಿನ ಉನ್ನತಿ ಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗೋರ್ಕಲ್ ನಲ್ಲಿ ಪೌಷ್ಟಿಕತೆಯ ಆಹಾರ ತೆಗೆದುಕೊಳ್ಳುವುದರ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಕಾರ್ಯಕ್ರಮ ನಡೆಯಿತು. . ಇದೇ ವೇಳೆ ಶಾಲೆಯ ಮುಖ್ಯ ಗುರು ರಮೇಶ ಕುರ್ಡಿ ಮಾತನಾಡಿ ಎಲ್ಲಾ ವಿದ್ಯಾರ್ಥಿಗಳು ಪೌಷ್ಟಿಕತೆಯ ಆಹಾರ ಪ್ರತಿಯೊಬ್ಬರು ತೆಗೆದುಕೊಳ್ಳಬೇಕು ಆದ್ದರಿಂದ ಆಗುವ ಉಪಯೋಗಗಳನ್ನು ಅರ್ಥಮಾಡಿಕೊಳ್ಳಬೇಕು, ಆಗ ಆರೋಗ್ಯವಂತವಾಗಿ ಇರಲು ಸಾಧ್ಯವಾಗುತ್ತದೆ ಎಂದರು.




**ಅಪೌಷ್ಟಿಕತೆ ತೆಗೆದು ಹಾಕೋಣ:** ಮಕ್ಕಳಲ್ಲಿ ಅಪೌಷ್ಟಿಕತೆ ತೆಗೆದು ಹಾಕುವ ಕೆಲಸ ಸರ್ಕಾರ ಮಾಡುತ್ತಿದೆ ಹಾಗೂ ಅದರ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಎಲ್ಲಾ ಶಿಕ್ಷಕರಿಂದ ಆಗುತ್ತಿದೆ ಎಂದರು. ಆರೋಗ್ಯದ ಬಗ್ಗೆ ಹೆಚ್ಚು ಹೆಚ್ಚು ಗಮನಹರಿಸುವ ಕೆಲಸ ಮಕ್ಕಳ ಪೋಷಕರು ಸಹ ಮಾಡಬೇಕು ಆಗ ಉತ್ತಮ ಆರೋಗ್ಯ ಉಳ್ಳ ಜೀವನ ನಡೆಸಲು ಸಾಧ್ಯ ಎಂದರು.

**ಗೋರ್ಕಲ್ ಶಾಲೆಯಲ್ಲಿ ವಿವಿಧ ಕಾರ್ಯಕ್ರಮ:** ನಮ್ಮ ಗೋರ್ಕಲ್ ಗ್ರಾಮದಲ್ಲಿ ಮಕ್ಕಳ ಆರೋಗ್ಯ ಗುಣಮಟ್ಟ ಸುಧಾರಣೆಗೆ ಬೇಕಾಗುವ ಜಾಗೃತಿ ಕಾರ್ಯಕ್ರಮ, ಮಕ್ಕಳನ್ನು ಶಾಲೆಗೆ ಕಳುಹಿಸಿ ಎಂಬ ಪೋಷಕರಲ್ಲಿ ಅರಿವು ಮೂಡಿಸುವ ವಿನೋತನ ಕಾರ್ಯಕ್ರಮ ಇನ್ನಿತರ ಅನೇಕ ಕಾರ್ಯಕ್ರಮಗಳು ಶಾಲೆಯಲ್ಲಿ ಹಮ್ಮಿಕೊಳ್ಳುತ್ತ ಬಂದಿದ್ದೇವೆ ಎಂದರು. ಈ ಸಂದರ್ಭದಲ್ಲಿ ಶಾಲೆಯ ಸಹ ಶಿಕ್ಷಕಿಯರಾದ ಈರಮ್ಮ ಚಂದ್ರಶೇಖರ, ರೇಷ್ಮಾ ಡಿ,ಸಿಂಧೂ ಕುಮಾರಿ, ವೆಂಕಟೇಶ ಹಾಗೂ ಅತಿಥಿ ಶಿಕ್ಷಕರು ಅಡುಗೆ ಸಹಾಯಕಿಯರು ಇತರರು ಇದ್ದರು.

# ಮಹಿಳೆಯರ ಹಕ್ಕುಗಳಿಗಾಗಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದವರು ಅಂಬೇಡ್ಕರ್: ಅಮರಯ್ಯ ಘಂಟಿ

**ಯುವ ಮಾರ್ಗ ಸುದ್ದಿ**

**ಲಿಂಗಸೂಗೂರು,ಜು.21–** ಸ್ವಾತಂತ್ರ್ಯ ನಂತರ ಭಾರತ ದೇಶದಲ್ಲಿ ಎಲ್ಲಾ ಜಾತಿ, ವರ್ಗದ ಮಹಿಳೆಯರಿಗೆ ಸ್ವಾತಂತ್ರ್ಯ, ಸಮಾನತೆ, ಎಲ್ಲಾ ಕ್ಷೇತ್ರಗಳಲ್ಲಿ ಮುಕ್ತ ಸಮಾನ ಅವಕಾಶಗಳ ಹಕ್ಕುಗಳಿಗಾಗಿ ಹೋರಾಡಿ, ಸಂಸತ್ತಿನಲ್ಲಿ ಹಿಂದೂಕೋಡ್ ಬಿಲ್ ಮಂಡಿಸಿದಾಗ ಮೇಲ್ವರ್ಗದ ಮಹಿಳೆಯರು ಸೇರಿದಂತೆ ಅನೇಕರು ಅದನ್ನು ವಿರೋಧಿಸಿದಕ್ಕಾಗಿ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದವರು ಬಾಬಾಸಾಹೇಬ್ ಡಾ.ಬಿ. ಆರ್.ಅಂಬೇಡ್ಕರ್ ಎಂದು ಲಿಂಗಸೂಗೂರು ತಾಲೂಕ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾಯರ್ದರ್ಶಿ ಹಾಗೂ ಸಾಹಿತಿ ಅಮರಯ್ಯ ಘಂಟಿ ಅಭಿಪ್ರಾಯ ವ್ಯಕ್ತಪಡಿಸಿದರು.

ಲಿಂಗಸೂಗೂರು ಪಟ್ಟಣದ ವಾರ್ಡ್ ನಂ.05 ರಲ್ಲಿ ಕಾಳಪೂರ ಕ್ರಾಸ್ ಹತ್ತಿರ ಮಾನಮ್ಮ – ಕುಪ್ಪಣ್ಣ ಮೋತಿ ಇವರ



ಮನೆಯಲ್ಲಿ ಬಹುಜನ ಸಂಘರ್ಷ ಸಮಿತಿಯಿಂದ ಭಾನುವಾರ ಆಯೋಜಿಸಿದ್ದ, 119ನೇ ಮನೆ–ಮನೆಗೆ ಅಂಬೇಡ್ಕರ್ ಕಾರ್ಯಕ್ರಮದಲ್ಲಿ ಮುಖ್ಯಭಾಷಣಕಾರರಾಗಿ ಮಾತನಾಡಿದರು.

ಅಂದು ಹಿಂದೂಕೋಡ್ ಬಿಲ್ ವಿರೋಧಿಸಿದ ಮೇಲ್ವರ್ಗದ ಮಹಿಳೆಯರೇ ಇಂದು ಹೆಚ್ಚು ಅವಕಾಶಗಳನ್ನು ಪಡೆದುಕೊಂಡಿದ್ದಾರೆ. ದಲಿತ ಮಹಿಳೆಯರ ಬದುಕು ಇನ್ನೂ ಚಿಂತಾಜನಕವಾಗಿದೆ ಎಂದರು.

ಸಂಶೋಧಕರು ಹಾಗೂ ಚಿಂತಕರಾದ ಡಾ.ಚಂದ್ರಶೇಖರಪ್ಪ ವ್ಯಾಕರನಾಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಅಕ್ಷರ ವಂಚಿತ ಬಹುಸಂಖ್ಯಾತ ತಳ ಸಮುದಾಯದ ಜನರು ಶೋಷಣೆಗೆ, ದೌರ್ಜನ್ಯಕ್ಕೆ, ಜಾತಿ ಕ್ರೌರ್ಯದಿಂದ ಅಸಮಾನತೆಗೆ ಒಳಗಾದ ಜನತೆಗೆ ಅವರ ಸಂಪೂರ್ಣ ಏಳ್ಗೆಗಾಗಿ ಶಿಕ್ಷಣವೆಂಬ ಅಸ್ತ್ರವನ್ನು ಸಂವಿಧಾನಬದ್ಧವಾಗಿ ನೀಡಿದವರು ಬಾಬಾಸಾಹೇಬ್ ಡಾ.ಬಿ. ಆರ್.ಅಂಬೇಡ್ಕರ್ ಎಂದರು.

ಪ್ರಾಸ್ತಾವಿಕವಾಗಿ ಬಹುಜನ ಸಂಘರ್ಷ ಸಮಿತಿ ಸಂಸ್ಥಾಪಕ ಅಧ್ಯಕ್ಷ ಜೆ.ಶರಣಪ್ಪ ಬಲ್ಲಟಗಿ ಮಾತನಾಡಿ ಬಾಬಾಸಾಹೇಬ್ ಡಾ.ಅಂಬೇಡ್ಕರ್ ರವರ ಎರ ಡು ಕನಸುಗಳು ಒಂದು ಬಹುಜನರು ಆಳುವ ವರ್ಗವಾಗಬೇಕು. ಇನ್ನೊಂದು ಸಾಂಸ್ಕೃತಿಕವಾಗಿ ಬದಲಾಗಬೇಕು ಎನ್ನುವುದನ್ನು ನೆನಸು ಮಾಡಲು ಬಹುಜನರು ಪ್ರಯತ್ನಿಸಬೇಕು ಎಂದರು.ಕುಟುಂಬದ ಮುಖ್ಯಸ್ಥ ಕುಪ್ಪಣ್ಣ ಮೋತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಯುವಕ ರಮೇಶ ಮೋತಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಈ ಸಂದರ್ಭದಲ್ಲಿ ಬಹುಜನ ಸಂಘರ್ಷ ಸಮಿತಿ ಲಿಂಗಸೂಗೂರು ತಾಲೂ ಕಾಧ್ಯಕ್ಷ ಜಿ.ಸೋಮನಾಥ ನಾಯಕ ಬಲ್ಲಟಗಿ, ಅರಕೇರಾ ತಾಲೂಕಾಧ್ಯಕ್ಷ ಬಸವರಾಜ ಮರಕಂದಿನ್ನಿ, ಅಲೆಮಾರಿ ಸಮುದಾಯದ ಯುವ ಮುಖಂಡ, ಸಾಮಾಜಿಕ ಕಾರ್ಯಕರ್ತ ಬಸವರಾಜ ಕೊಡಗಂಟಿ, ರೈತ ಹೋರಾಟಗಾರ ಹನುಮಂತ ನಾಗಲಪೂರ, ಸೋಮಣ್ಣ ಸಂಕಲ್, ಹನುಮಂತ ಮೋತಿ, ಯಂಕಮ್ಮ, ಗುರುಲಿಂಗ ಸೇರಿದಂತೆ ಕುಟುಂಬಸ್ಥರು ಭಾಗವ ಹಿಸಿದ್ಧರು.

# ಶ್ರೀಕರಿಯಪ್ಪ ತಾತನವರ ಜಾತ್ರೆಗೆ ಅಗತ್ಯ ಸಿದ್ಧತೆಯಾಗಲಿ: ಬಸನಗೌಡ ದದ್ದಲ್

**ಯುವ ಮಾರ್ಗ ಸುದ್ದಿ**

**ರಾಯಚೂರು,ಜು.21–**ನಾಗರ ಪಂಚಮಿಯ ದಿನ ಜುಲೈ 29ರ ಸಂಜೆ 6.30ಕ್ಕೆ ಸಹಸ್ರಾರು ಭಕ್ತರೊಂದಿಗೆ ನಡೆಯುವ ಶ್ರೀ ಕರಿಯಪ್ಪ ತಾತನವರ ಜಾತ್ರಾ ರಥ ಮಹೋತ್ಸವನ್ನು ಭಕ್ತಿ ಶ್ರದ್ಧೆಯಿಂದ ಶಾಂತಿಯುತವಾಗಿ ಆಚರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.




ನಗರದ ಶಾಸಕರ ಕಚೇರಿಯಲ್ಲಿ ಶ್ರೀಕರಿಯಪ್ಪ ತಾತನವರ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಿದ್ಧತಾ ಸಭೆ ನಡೆಸಿ ಅವರು ಮಾತನಾಡಿದರು.

ಶ್ರೀ ಕರಿಯಪ್ಪ ತಾತನವರ ಜಾತ್ರೆಯು ನಮ್ಮ ಭಾಗದಲ್ಲಿ ವಿಶೇಷವಾಗಿ ನಡೆಯುತ್ತದೆ. ಈ ಜಾತ್ರೆಗೆ ರಾಜ್ಯದ ಬೇರೆ ಬೇರೆ ಭಾಗದ ಜನರು ಸೇರಿದಂತೆ ಅಂತಾರಾಜ್ಯದ ಜನರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವುದರಿಂದ ಯಾವುದೇ ರೀತಿಯ ತೊಂದರೆಗಳು ಆಗದ ಹಾಗೆ ಈಗಿನಿಂದಲೇ ಅಧಿಕಾರಿಗಳು ಸಿದ್ಧತಾ ಕಾರ್ಯ ಮಾಡಬೇಕು.

ದೇವಸ್ಥಾನದ ಆವರಣದಲ್ಲಿ ಮತ್ತು ಸುತ್ತಲು ಶುಚಿತ್ವಕ್ಕೆ ಗಮನ ಕೊಡಬೇಕು. ರಥದ ಬೀದಿಯನ್ನು ಸರಿಯಾಗಿ ಸಿದ್ಧಪಡಿಸಬೇಕು. ಭಕ್ತರಿಗೆ ಶುದ್ಧವಾದ ಕುಡಿಯುವ ನೀರು ಪೂರೈಕೆಗೆ ವ್ಯವಸ್ಥೆ ಮಾಡಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರುವುದರಿಂದ ಜನರ ಸುರಕ್ಷತೆ ದೃಷ್ಟಿಯಿಂದ ಬ್ಯಾರಿಕೇಡ್ ಬಳಸಬೇಕು. ಮತ್ತು ಇನ್ನೀತರ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಶಾಸಕರು ಅಧಿಕಾರಿಗಳಿಗೆ ಆದೇಶಿಸಿದರು.

ಜಾತ್ರೋತ್ಸವ ಸಂದರ್ಭದಲ್ಲಿ ವಿದ್ಯುತ್ ಪೂರೈಕೆ ಸರಿಯಾಗಿ ಆಗಬೇಕು. ಅಂಬುಲೆನ್ಸ್ ಸೇರಿದಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳು ವೈದ್ಯಕೀಯ ಚಿಕಿತ್ಸೆಗೆ ಏರ್ಪಾಡು ಮಾಡಬೇಕು ಭಕ್ತರಿಗೆ ಜಾತ್ರೆಗೆ ಬರಲು ಬಸ್ಸಿನ ಸೌಕರ್ಯ ಕಲ್ಪಿಸಲು ಕ್ರಮ ವಹಿಸಬೇಕು ಎಂದು ಶಾಸಕರು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

**ಗ್ರಾಮಸ್ಥರಿಂದ ಸಲಹೆ:** ಈ ಸಂದರ್ಭದಲ್ಲಿ ಗ್ರಾಮದ ಹಿರಿಯ ಮುಖಂಡರು, ಸುತ್ತಲಿನ ಗ್ರಾಮಸ್ಥರು, ನಾಮ ನಿರ್ದೇಶನ ಸದಸ್ಯರು, ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು ಸಭೆಯಲ್ಲಿ ಭಾಗಿಯಾಗಿ ನಾನಾ ಸಲಹೆಗಳನ್ನು ನೀಡಿದರು.

ಸಭೆಯಲ್ಲಿ ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆ, ಪೋಲಿಸ್ ಇಲಾಖೆ, ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಲೋಕೋಪಯೋಗಿ ಇಲಾಖೆ, ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆ, ಜೆಸ್ಕಾಂ ಇಲಾಖೆ, ಅಬಕಾರಿ ಇಲಾಖೆ ಮತ್ತು ಸಾರಿಗೆ ಇಲಾಖೆಯ ಅಧಿಕಾರಿಗಳು ಇದ್ದರು.

# ರಾಜ್ಯದಲ್ಲಿ ಪಕ್ಷ ಸಂಘಟನೆಗೆ ಹೆಚ್ಚಿನ ಒತ್ತು : ಬಿ.ವೈ ವಿಜಯೇಂದ್ರ



**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು,ಜು.21–** ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರು ಯಾರು ಆಗಬೇಕು ಎಂದು ವರಿಷ್ಠರು ತೀರ್ಮಾನಿಸುತ್ತಾರೆ. ಪಕ್ಷದ ಸಂಘಟನೆಗೆ ಒತ್ತು ನೀಡಿ ಕೆಲಸ ಮಾಡುವುದಷ್ಟೇ ನಮ್ಮ ಕಾಯಕ ಎಂದು ಬಿಜೆಪಿ ರಾಜ್ಯಾಧ್ಯಕ್ಷರ ಬಿ.ವೈ ವಿಜಯೇಂದ್ರ ತಿಳಿಸಿದರು.ಲಿಂಗಸುಗೂರು ಪಟ್ಟಣದಲ್ಲಿ ಮಾದ್ಯಮದವರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಪಕ್ಷದ ಸಂಘಟನೆಗೆ ಹೆಚ್ಚಿನ ಒತ್ತುಕೊಟ್ಟು ಕೆಲಸ ಮಾಡುತ್ತಿದ್ದೇವೆ. ರಾಜ್ಯಾದ್ಯಕ್ಷ ಸ್ಥಾನದ ಆಯ್ಕೆ ಕುರಿತು ಅಂತೀಮವಾಗಿ ಪಕ್ಷದ ವರಿಷ್ಠರು ತೀರ್ಮಾನಿಸುತ್ತಾರೆ. ಪಕ್ಷದ ವರಿಷ್ಠರ ತೀರ್ಮಾನಕ್ಕೆ ಬದ್ದರಾಗಿ ಪಕ್ಷದ ಸಂಘಟನೆ ಮಾಡುವುದು ನಮ್ಮ ಗುರಿಯಾಗಿದ ಎಂದು ಹೇಳಿದರು.

ಕೂಡಲಸಂಗಮದ ಪಂಚಮಸಾಲಿ ಗುರುಪೀಠದಲ್ಲಿ ಉದ್ಭವಿಸಿರುವ ಸಮಸ್ಯೆ ಕುರಿತು ಹಿರಿಯ ಮುಖಂಡ ಮುರುಗೇಶ ನಿರಾಣಿಯವರು ಎಲ್ಲವನ್ನು ಬಗೆಹರಿಸುತ್ತಾರೆ. ಕೂಡಲ ಸಂಗಮದ ಸಮಸ್ಯೆ ಸುಖಾಂತ್ಯವಾಗಲಿದೆ.

ಈ ಸಂದರ್ಭದಲ್ಲಿ ಶಾಸಕ ಮಾನಪ್ಪ ವಜ್ಜಲ್, ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ, ಗಿರಿಮಲ್ಲನಗೌಡ, ನ್ಯಾಯವಾದಿ ಅಯ್ಯಪ್ಪ ಮಾಳೂರು ಸೇರಿದಂತೆ ಇದ್ದರು.

# ಇಎಸ್‌ಇ ದಲ್ಲಿ ಉದ್ಯೋಗಿಗಳಿಗೆ ನೋಂದಣಿಗೆ ಅವಕಾಶ

**ರಾಯಚೂರು,ಜು.21–** ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಹಾಗೂ ಯುವಜನ ಮತ್ತು ಕ್ರೀಡಾ ಸಚಿವರಾದ ಡಾ. ಮನ್ಸುಖ್ ಮಾಂಡವೀಯ ಅವರ ಅಧ್ಯಕ್ಷತೆಯಲ್ಲಿ ಹಿಮಾಚಲ ಪ್ರದೇಶದ ಶಿಮ್ಲಾದಲ್ಲಿ ನಡೆದ ಕಾರ್ಮಿಕರ ರಾಜ್ಯ ವಿಮಾ ನಿಗಮದ 196ನೇ ಸಭೆಯಲ್ಲಿ ಕಾರ್ಮಿಕರ ರಾಜ್ಯ ವಿಮಾ ನಿಗಮವು (ಇಎಸ್‌ಐಸಿ) ಉದ್ಯೋಗದಾತರು ಮತ್ತು ಉದ್ಯೋಗಿಗಳ ನೋಂದಣಿಯನ್ನು ಉತ್ತೇಜಿಸುವ ಯೋಜನೆ2025ರ ಎಂಬ ನವೀಕೃತ ಯೋಜನೆಯನ್ನು ಇತ್ತೀಚೆಗೆ ಅನುಮೋದಿಸಲಾಯಿತು.

ಕಾರ್ಮಿಕರ ರಾಜ್ಯ ವಿಮಾ ನಿಗಮವು ಸಾಮಾಜಿಕ ಭದ್ರತಾ ವ್ಯಾಪ್ತಿಯನ್ನು ವಿಸ್ತರಿಸಲು ಅನುಮೋದಿಸಿದ ಒಂದು ವಿಶೇಷ ಉಪಕ್ರಮವಾಗಿದೆ. 2025ರ ಜುಲೈ 1ರಿಂದ 2025ರ ಡಿಸೆಂಬರ್ 31ರವರೆಗೆ ಸಕ್ರಿಯವಾಗಿದ್ದು, ಗುತ್ತಿಗೆ ಹಾಗೂ ತಾತ್ಕಾಲಿಕ ಕಾರ್ಮಿಕರು ಸೇರಿದಂತೆ ಇಎಸ್‌ಇ ಅಡಿಯಲ್ಲಿ ಇನ್ನೂ ನೋಂದಾವಣೆಯಾಗದ ಉದ್ಯೋಗದಾತರು ಮತ್ತು ಉದ್ಯೋಗಿಗಳು ಯಾವುದೇ ಪರಿಶೀಲನೆ ಅಥವಾ ಹಿಂದಿನ ಅವಧಿಯ ಯಾವುದೇ ಬಾಕಿಯ ಬೇಡಿಕೆ ಇಲ್ಲದೇ ನೋಂದಾಯಿಸಿಕೊಳ್ಳಲು ಒಂದು ಬಾರಿಯ ಅವಕಾಶವನ್ನು ಒದಗಿಸಲಾಗಿದೆ.

ಎಸ್‌ಪಿಆರ್‌ಇಇ 2025ರ ಅಡಿಯಲ್ಲಿ: ಉದ್ಯೋಗದಾತರು ತಮ್ಮ ಘಟಕಗಳು ಮತ್ತು ಉದ್ಯೋಗಿಗಳನ್ನು ಇಎಸ್‌ಐಸಿ ಪೋರ್ಟಲ್, ಶ್ರಮ್ ಸುವಿಧಾ, ಮತ್ತು ಎಂಸಿಎ ಪೋರ್ಟಲ್ ಮೂಲಕ ಡಿಜಿಟಲ್ ರೂಪದಲ್ಲಿ ನೋಂದಾಯಿಸಿಕೊಳ್ಳಬಹುದು. ಉದ್ಯೋಗದಾತರು ತಾವು ಘೋಷಿಸಿದ ದಿನಾಂಕದಿಂದ ನೋಂದಣಿಯನ್ನು ಪರಿಗಣಿಸಲಾಗುತ್ತದೆ. ನೋಂದಣಿಯ ಪೂರ್ವ ಅವಧಿಗೆ ಯಾವುದೇ ವಂತಿಗೆ ಮತ್ತು ಸೌಲಭ್ಯವನ್ನು ಅನ್ವಯಿಸುವುದಿಲ್ಲ. ನೋಂದಣಿಯ ಪೂರ್ವ ಅವಧಿಯ ಯಾವುದೇ ದಾಖಲೆಗಳ ಪರಿಶೀಲನೆ ಅಥವಾ ಬೇಡಿಕೆ ಇರುವುದಿಲ್ಲ.

ಈ ಯೋಜನೆಯು ಸ್ವಯಂಪ್ರೇರಿತವಾದ ಅನುಸರಣೆಯನ್ನು ಪ್ರೋತ್ಸಾಹಿಸಿ ಹಿಂದಿನ ಅವಧಿಗೆ ದಂಡ ಪಾವತಿಸಬೇಕಾದ ಭಯವನ್ನು ಹೋಗಲಾಡಿಸಿ ನೋಂದಾವಣಿಯ ಪ್ರಕ್ರಿಯೆಯನ್ನು ಸರಳೀಕರಿಸಲಾಗಿದೆ. ಎಸ್‌ಪಿಆರ್‌ಇಇ 2025ನ್ನು ಅನುಮೋದಿಸುವ ಮೊದಲು ನಿಗಧಿತ ಅವಧಿಯಲ್ಲಿ ನೋಂದಾವಣೆ ಮಾಡದಿದ್ದಲ್ಲಿ ಕಾನೂನು ಕ್ರಮ ಹಾಗೂ ಹಿಂದಿನ ಅವಧಿಯ ಬಾಕಿ ಬೇಡಿಕೆಗೆ ಕಾರಣವಾಗುತ್ತಿತ್ತು. ಎಸ್‌ಪಿಆರ್‌ಇಇ 2025 ಈ ಅಡೆತಡೆಗಳನ್ನು ನಿವಾರಿಸಿ ನೋಂದಾವಣೆಯಿಂದ ಬಿಟ್ಟುಹೋದ ಘಟಕಗಳು ಮತ್ತು ಕಾರ್ಮಿಕರನ್ನು ಇಎಸ್‌ಐ ವ್ಯಾಪ್ತಿಯೊಳಗೆ ಸೇರಿಸಿ ಸಾಮಾಜಿಕ ಭದ್ರತೆಯನ್ನು ಖಚಿತಪಡಿಸುತ್ತದೆ.

ಎಸ್‌ಪಿಆರ್‌ಇಇ 2025ರ ಪ್ರಾರಂಭವು ಕಾರ್ಮಿಕರ ರಾಜ್ಯ ವಿಮಾ ನಿಗಮದ ಒಂದು ಪ್ರಗತಿಪರ ಹೆಜ್ಜೆಯಾಗಿದ್ದು, ಸರಳ ಮತ್ತು ಹಿಂದಿನ ಅವಧಿಯ ಬಾಕಿಯ ಬೇಡಿಕೆಯಿಲ್ಲದೆ ನೋಂದಾವಣೆಯಾಗಿ ಸುಲಭವಾಗಿ ಸಾಮಾಜಿಕ ಭದ್ರತೆಗೆ ಒಳಪಡುವ ಯೋಜನೆಯಾಗಿದೆ. ಈ ಯೋಜನೆಯು ಉದ್ಯೋಗದಾತರು ಕೇವಲ ತಮ್ಮ ಕಾರ್ಯಪಡೆಯ ಕ್ರಮಬದ್ಧಗೊಳಿಸುವಿಕೆಯನ್ನು ಪ್ರೋತ್ಸಾಹಿಸುವುದಲ್ಲದೆ, ಇನ್ನೂ ಹೆಚ್ಚಿನ ಕಾರ್ಮಿಕರನ್ನು ವಿಶೇಷವಾಗಿ ಗುತ್ತಿಗೆ ವಲಯದ ಕಾರ್ಮಿಕರು ಇಎಸ್‌ಐ ಕಾಯ್ದೆಯಡಿಯಲ್ಲಿ ದೊರೆಯುವ ಅಗತ್ಯ ಆರೋಗ್ಯ ರಕ್ಷಣೆ ಹಾಗೂ ಸಾಮಾಜಿಕ ಸೌಲಭ್ಯಗಳನ್ನು ಪಡೆಯುವುದನ್ನು ಉತ್ತೇಜಿಸುತ್ತದೆ. ಇದರೊಂದಿಗೆ ಇಎಸ್‌ಐಸಿಯು ಅಗತ್ಯ ಆರೋಗ್ಯ ರಕ್ಷಣೆ ಮತ್ತು ಸಾಮಾಜಿಕ ಭದ್ರತೆಯನ್ನು ತಲುಪಿಸುವ ತನ್ನ ಬದ್ಧತೆಯನ್ನು ಉಳಿಸಿಕೊಂಡು ಭಾರತದ ಕಾರ್ಮಿಕ ಕಲ್ಯಾಣ ಕೇಂದ್ರಿತ ದೃಷ್ಟಿಕೋನಕ್ಕೆ ಅನುಗುಣವಾಗಿದೆ ಎಂದು ಕಾರ್ಮಿಕರ ರಾಜ್ಯ ವಿಮಾ ನಿಗಮದ ಜಿಲ್ಲಾ ಶಾಖಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H